# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 930 |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 27.12.2022 |
| ಉತ್ತರಿಸುವವರು | : | ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ವಿಕಲಾಂಗ ಮತ್ತು ಅಂಧ, ಮಹಿಳೆ/ಪುರುಷ, ಅಧಿಕಾರಿ/ನೌಕರರು ಎಷ್ಟು ಜನ ಸರ್ಕಾರಿ ಉದ್ಯೋಗದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ; (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಸರ್ಕಾರಿ ಉದ್ಯೋಗದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಕಲಚೇತನ ನೌಕರರ ವಿವರವನ್ನು ಅನುಬಂಧ-01ರಲ್ಲಿ ಒದಗಿಸಲಾಗಿದೆ. |
| ಆ) | ಈ ವಿಕಲಾಂಗ ಮತ್ತು ಅಂಧ, ಮಹಿಳೆ/ಪುರುಷ, ಅಧಿಕಾರಿ/ನೌಕರರನ್ನು ಸರ್ಕಾರಿ ಉದ್ಯೋಗಕ್ಕೆ ಆಯ್ಕೆ ಮಾಡಲು ಇರುವ ಮಾನದಂಡಗಳೇನು; ಸರ್ಕಾರಿ ಕರ್ತವ್ಯದಲ್ಲಿರುವವರಿಗೆ ಸಂಬಂಧಪಟ್ಟ ಇಲಾಖೆಯಿಂದ (Guidelines)ಇರುವ ಸಡಿಲಿಕೆಗಳೇನು; (ವಿವರ ನೀಡುವುದು) | 1. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 149 ಎಸ್ಆರ್ಆರ್ 2020, ದಿನಾಂಕ:25.09.2020ರಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಗ್ರೂಪ್-ಎ ಮತ್ತು ಗ್ರೂಪ್-ಬಿ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ವಿಕಲಚೇತನರಿಗೆ ಶೇ.4ರಷ್ಟು ಹಾಗೂ ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಲ್ಲಿ ಶೇ.5ರಷ್ಟು ಹುದ್ದೆಗಳನ್ನು ಮೀಸಲಿರಿಸಿ ಆದೇಶಿಸಲಾಗಿರುತ್ತದೆ. ಅನುಬಂಧ-2ರಲ್ಲಿ ಒದಗಿಸಲಾಗಿದೆ.<br>2. ಸದರಿ ಸರ್ಕಾರಿ ಆದೇಶದಲ್ಲಿ ವಿಕಲಚೇತನರಿಗೆ ನಿಗದಿಪಡಿಸಿರುವ ರೋಸ್ಟರ್ ಬಿಂದುಗಳನ್ವಯ ಆಯಾ ನೇಮಕಾತಿ ಪ್ರಾಧಿಕಾರಗಳು ಸರ್ಕಾರಿ ನೇರ ನೇಮಕಾತಿ ಹುದ್ದೆಗಳಿಗೆ ವಿಕಲಚೇತನರ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತಿದೆ.<br>3. ಅದೇ ಸರ್ಕಾರಿ ಆದೇಶದಲ್ಲಿ ಒಂದು ವೇಳೆ ಅಧಿಸೂಚಿಸಿರುವ ಅಂಗವಿಕಲತೆ ಹೊಂದಿರುವ ಅಭ್ಯರ್ಥಿ ಲಭ್ಯವಿಲ್ಲದೇ ಇದ್ದಲ್ಲಿ ಅಂತಹ ರಿಕ್ತ ಸ್ಥಾನವನ್ನು ಮುಂದಿನ ನೇಮಕಾತಿಗೆ ಮುಂದಕ್ಕೊಯ್ಯತಕ್ಕದ್ದು. ಮುಂದಿನ ನೇಮಕಾತಿಯಲ್ಲಿಯೂ ಅಧಿಸೂಚಿತ ಅಂಗವಿಕಲತೆ ಹೊಂದಿರುವ ಅಭ್ಯರ್ಥಿ ಲಭ್ಯವಿಲ್ಲದೇ ಇದ್ದಲ್ಲಿ, ನೇರ ಮೀಸಲಾತಿಯಡಿ ಬರುವ ಆಯಾ ಪ್ರವರ್ಗದ ಇತರ ಅಂಗವಿಕಲತೆಯುಳ್ಳ ಅರ್ಹ ಅಂಗವಿಕಲ ಅಭ್ಯರ್ಥಿಯಿಂದ ಭರ್ತಿ ಮಾಡತಕ್ಕದ್ದು. ಒಂದು ವೇಳೆ ಯಾವುದೇ ಅಂಗವಿಕಲ ಅಭ್ಯರ್ಥಿ ಲಭ್ಯವಿಲ್ಲದಿದ್ದಲ್ಲಿ, ಆಯಾ ಪ್ರವರ್ಗದ ಇತರೆ ಅರ್ಹ ಅಭ್ಯರ್ಥಿಯಿಂದ ಭರ್ತಿ ಮಾಡಿಕೊಳ್ಳತಕ್ಕದ್ದೆಂದು ಎಲ್ಲಾ ನೇಮಕಾತಿ ಪ್ರಾಧಿಕಾರಗಳಿಗೆ ಸೂಚಿಸಲಾಗಿರುತ್ತದೆ. ಅದರನ್ವಯ ಅಂಗವಿಕಲ ಅಭ್ಯರ್ಥಿಗಳ ನೇಮಕಾತಿಯನ್ನು ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರಗಳು ಆಯ್ಕೆ ಮಾಡಲಾಗುತ್ತಿದೆ.<br>4. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 04ಕತವ 2019, ದಿನಾಂಕ:08.02.2019ರಲ್ಲಿ ದಿನಾಂಕ:01.02.2019 ರಿಂದ ಜಾರಿಗೆ ಬರುವಂತೆ ಅಂಗವಿಕಲ ಸರ್ಕಾರಿ ನೌಕರರುಗಳಿಗೆ ಭೋಜನ ಸಮಯದಲ್ಲಿ ಕಛೇರಿಯ ವೇಳೆಯ ನಂತರವೂ ಕರ್ತವ್ಯ ನಿರ್ವಹಿಸುವ ಷರತ್ತಿಗೊಳಪಟ್ಟು ನಿಗದಿತ ಕಛೇರಿ ವೇಳೆಗಿಂತ ಒಂದು ಗಂಟೆ ತಡವಾಗಿ ಕರ್ತವ್ಯಕ್ಕೆ ಹಾಜರಾಗಲು ಮಿದು ಸಮಯವನ್ನು ಜಾರಿಗೆ ತರಲಾಗಿರುತ್ತದೆ. ಅನುಬಂಧ-3ರಲ್ಲಿ ಒದಗಿಸಲಾಗಿದೆ. |
| ಇ) | ಹಾಗಿದ್ದಲ್ಲಿ, ವಿಕಲಾಂಗ ಮತ್ತು ಅಂಧ, ಮಹಿಳೆ/ಪುರುಷ, ಅಧಿಕಾರಿ/ನೌಕರರಿಗೆ ಕರ್ತವ್ಯದ ಅವಧಿಯಲ್ಲಿ ತೊಂದರೆಯಾದರೆ ರಾಜ್ಯ ಸರ್ಕಾರದಿಂದ ಇರುವ ವಿಶೇಷ ರಕ್ಷಣಾತ್ಮಕ ಮಾನದಂಡಗಳೇನು; (ಆದೇಶದ ವಿವರ ನೀಡುವುದು) | 1. ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ-2016ರ ಸೆಕ್ಷನ್ 72ರ ಪ್ರಕಾರ ಪ್ರತಿ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಅಂಗವಿಕಲರ ಸಮಿತಿಗಳನ್ನು ರಚಿಸಲಾಗಿದ್ದು, ವಿಕಲಚೇತನ ಸರ್ಕಾರಿ ನೌಕರರು ಸೇರಿದಂತೆ ಎಲ್ಲಾ ಅಂಗವಿಕಲ ವ್ಯಕ್ತಿಗಳು ಯಾವುದೇ ತೊಂದರೆಗೆ ಒಳಗಾದಲ್ಲಿ ಈ ಸಮಿತಿಗೆ ದೂರುಗಳನ್ನು ಸಲ್ಲಿಸಬಹುದಾಗಿದೆ. ಸಮಿತಿ ರಚನೆಯ |

| | | |
|---|---|---|
| | | ಪ್ರತಿಯನ್ನು ಅನುಬಂಧ-4ರಲ್ಲಿ ಒದಗಿಸಲಾಗಿದೆ.<br>2. ಅಲ್ಲದೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪ್ರತಿ ಮೂರನೇ ಸೋಮವಾರ ವಿಕಲಚೇತನರ ಕುಂದು ಕೊರತೆಗಳ ಸಭೆ ನಡೆಯಲಿದ್ದು, ಇಲ್ಲಿಯೂ ಸಹ ದೂರನ್ನು ದಾಖಲಿಸಬಹುದಾಗಿದೆ.<br>3. ರಾಜ್ಯ ಮಟ್ಟದಲ್ಲಿ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ ಕಚೇರಿಯು ಕಾರ್ಯನಿರ್ವಹಿಸುತ್ತಿದ್ದು, ವಿಕಲಚೇತನ ವ್ಯಕ್ತಿಗಳ ಹಕ್ಕುಗಳನ್ನು ಸಂರಕ್ಷಿಸುವಲ್ಲಿ ಈ ಕಛೇರಿಯ ರಾಜ್ಯ ಆಯುಕ್ತರು ಅರೆ ನ್ಯಾಯಿಕ ಸ್ಥಾನಮಾನಗಳನ್ನು ಹೊಂದಿರುತ್ತಾರೆ ಮತ್ತು ಈ ಕಚೇರಿಯನ್ನು ಸಿವಿಲ್ ನ್ಯಾಯಾಲಯವೆಂದು ಭಾವಿಸಲಾಗಿದ್ದು, ಈ ನ್ಯಾಯಾಲಯದಲ್ಲಿಯೂ ಸಹ ತೊಂದರೆಗೆ ಒಳಗಾದ ವಿಕಲಚೇತನ ವ್ಯಕ್ತಿಗಳು ದೂರು ದಾಖಲಿಸಬಹುದಾಗಿದೆ. |
| ಈ) | ಹಾಗಿದ್ದಲ್ಲಿ, ಈ ರೀತಿ ವಿಕಲಾಂಗ ಮತ್ತು ಅಂಧ, ಮಹಿಳೆ/ಪುರುಷ, ಅಧಿಕಾರಿ/ನೌಕರರಿಗೆ ಕರ್ತವ್ಯದ ಅವಧಿಯಲ್ಲಿ ಮಾನಸಿಕ ಒತ್ತಡ, ಅವಧಿ ಪೂರ್ವ ವರ್ಗಾವಣೆ, ದೌರ್ಜನ್ಯ ಉಂಟಾಗಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಅತಂಹ ಪ್ರಕರಣಗಳು ಯಾವ ಹಂತದಲ್ಲಿವೆ ಹಾಗೂ ತಪ್ಪಿತಸ್ಥರ ವಿರುದ್ಧ ಕೈಗೊಂಡ ಕ್ರಮಗಳೇನು; (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು) | ವಿಕಲಾಂಗ ಮತ್ತು ಅಂಧ, ಮಹಿಳೆ/ಪುರುಷ, ಅಧಿಕಾರಿ/ನೌಕರರಿಗೆ ಕರ್ತವ್ಯದ ಅವಧಿಯಲ್ಲಿ ಮಾನಸಿಕ ಒತ್ತಡ, ಅವಧಿ ಪೂರ್ವ ವರ್ಗಾವಣೆ, ದೌರ್ಜನ್ಯ ಉಂಟಾಗಿರುವ ಬಗ್ಗೆ ರಾಜ್ಯ ಆಯುಕ್ತರು ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ ಕಚೇರಿಯಲ್ಲಿ ಹಲವಾರು ದೂರುಗಳು ಸ್ವೀಕೃತಗೊಂಡಿದ್ದು, ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ –2016ರ ಪ್ರಕಾರ ಸ್ವೀಕೃತಗೊಂಡ ದೂರುಗಳಿಗೆ ಕ್ರಮವಹಿಸಲಾಗಿದೆ. ವಿವರಗಳನ್ನು ಅನುಬಂಧ-5ರಲ್ಲಿ ಒದಗಿಸಲಾಗಿದೆ. |
| ಉ) | ಹಾಗಿದ್ದಲ್ಲಿ, ಹಾಸನ ತಾಲ್ಲೂಕು ವ್ಯಾಪ್ತಿಯಲ್ಲಿ ಅಂಧ ಮಹಿಳೆ ಅಧಿಕಾರಿ ಮೇಲೆ ದೌರ್ಜನ್ಯ ಮತ್ತು ದುರುದ್ದೇಶದಿಂದ ಅವಧಿಪೂರ್ವ ವರ್ಗಾವಣೆ ಮಾಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು? (ಕಾರಣ ಸಮೇತ ಸಂಪೂರ್ಣ ವಿವರ ನೀಡುವುದು) | ಕು॥ ಜೈಕಿರಣ್ ಸಿ.ಕೆ. ಇವರು ದಿನಾಂಕ: 21.03.2019 ರಂದು ಸರ್ಕಾರಿ ಸೇವೆಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಹಾಸನ ಜಿಲ್ಲೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದು, ಇವರಿಗೆ ದಿನಾಂಕಃ 07.11.2022ರ ಸರ್ಕಾರದ ಆದೇಶದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಹಾಸನ ಹುದ್ದೆಗೆ ವರ್ಗಾವಣೆ ಮಾಡಲಾಗಿರುತ್ತದೆ.<br>ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 25 ಸೇನೌವ 2015, ಬೆಂಗಳೂರು, ದಿನಾಂಕ: 14.10.2015ರ ಆದೇಶದಲ್ಲಿ ವರ್ಗಾವಣೆಗಾಗಿ ನಿಗದಿಪಡಿಸಿದ ಕನಿಷ್ಠ ಅವಧಿಯನ್ನು ಭಾಗಶಃ ಮಾರ್ಪಡಿಸಿ ಗುಂಪು-ಎ ಮತ್ತು ಬಿ ಹುದ್ದೆಗಳಿಗೆ ವರ್ಗಾವಣೆ ಮಾಡಲು 02 ವರ್ಷಗಳನ್ನು ಕನಿಷ್ಠ ಸೇವಾವಧಿ ಎಂದು ನಿಗದಿಪಡಿಸಿ ಆದೇಶಿಸಿದೆ. ಅದರಂತೆ ಸದರಿಯವರ ವರ್ಗಾವಣೆ ಅವಧಿ ಪೂರ್ವ ವರ್ಗಾವಣೆಯಾಗಿರುವುದಿಲ್ಲ.<br>ಹಾಸನ ತಾಲ್ಲೂಕು ವ್ಯಾಪ್ತಿಯಲ್ಲಿ ಅಂಧ ಮಹಿಳೆ ಅಧಿಕಾರಿ ಮೇಲೆ ದೌರ್ಜನ್ಯ ಮತ್ತು ದುರುದ್ದೇಶದಿಂದ ಅವಧಿ ಪೂರ್ವ ವರ್ಗಾವಣೆ ಮಾಡಿರುವ ಬಗ್ಗೆ ರಾಜ್ಯ ಆಯುಕ್ತರು ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದ್ದು, ಸದರಿ ನೌಕರರ ವಿರುದ್ಧ ದಾಖಲಾಗಿರುವ ದೂರಿನಲ್ಲಿನ ಅಂಶಗಳ ಕುರಿತು ಸಮಗ್ರ ತನಿಖೆ ನಡೆಸಿ ಅಂಧ ನೌಕರರ ಹಕ್ಕುಗಳನ್ನು ಸಂರಕ್ಷಿಸಲು ಈ ನ್ಯಾಯಾಲಯದಿಂದ ಸಂಬಂಧಪಟ್ಟ ನೌಕರರ ಮಾತ್ರ ಇಲಾಖೆಗೆ ಸೂಚನೆ ನೀಡಿ ಆದೇಶ ಹೊರಡಿಸಲಾಗಿದೆ. ನ್ಯಾಯಾಲಯದ ಆದೇಶದ ಪ್ರತಿ ಅನುಬಂಧ-6ರಲ್ಲಿ ಒದಗಿಸಲಾಗಿದೆ. |

ಸಂಖ್ಯೆ: ಮಮಇ 283 ಪಿಹೆಚ್‌ಪಿ 2022

Halappa

**(ಆಚಾರ ಹಾಲಪ್ಪ ಬಸಪ್ಪ)**

ಗಣಿ ಮತ್ತು ಭೂ ವಿಜ್ಞಾನ ಹಾಗೂ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ

ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ

ಇಲಾಖೆ ಸಚಿವರು.

ಅನುಬಂಧ-1

| DEPT_CD | DEPT_NAME | ANNEXURE | | | |
|---|---|---|---|---|---|
| | | GROUP | | | |
| | | A | B | C | D |
| AD | AD-DEPARTMENT OF ADVOCATE GENERAL | 0 | 0 | 2 | 0 |
| AH | AH-DEPT OF ANIMAL HUSBANDARY & VET SERVICE | 2 | 0 | 11 | 1 |
| AJ | AJ-HIGH COURT & SUBORDINATE COURTS | 5 | 2 | 583 | 127 |
| AL | AL-DEPT OF AGRICULTURE | 3 | 14 | 7 | 1 |
| AM | AM-DEPARTMENT OF AGRICULTURAL MARKETING | 0 | 1 | 15 | 0 |
| AT | AT-ADMINISTRATIVE TRANING INSTITUTE MYSORE | 1 | 0 | 3 | 0 |
| BW | BW-DEPARTMENT OF BACKWARD CLASSES | 0 | 0 | 2 | 0 |
| CA | CA-CO OPERATIVE AUDIT OFFICE | 0 | 1 | 4 | 2 |
| CN | CN-KARNATAKA STATE CONSUMER DISPUTE REDRESSAL COMMISSION | 0 | 0 | 5 | 6 |
| COA | CADA DIRECTORATE | 1 | 0 | 0 | 0 |
| CS | CS-DEPARTMENT OF CO-OPERATIVE SOCIETIES | 0 | 6 | 16 | 2 |
| CSS | Registrar Of Co-Operative Societies | 0 | 0 | 1 | 0 |
| CT | CT-DEPARTMENT OF COMMERCIAL TAX | 8 | 10 | 66 | 2 |
| DP | DP-SECRETARY, DPAR(ACCOUNTS) | 9 | 12 | 42 | 5 |
| DR | DR-DRUGS CONTROLLER DEPARTMENT | 0 | 1 | 4 | 1 |
| DS | DS-D.P.I., D.S.E.R.T. | 0 | 10 | 6 | 3 |
| DW | DW-DEPARTMENT OF WELFARE OF DISABLED | 0 | 2 | 36 | 1 |
| C | EC-DEPARTMENT OF COLLEGIATE EDUCATION | 57 | 78 | 28 | 12 |
| I | EI-CHIEF ELECTRICAL INSPECTOR ELECTRICAL INSPECTORATE | 0 | 0 | 3 | 0 |
| M | EM-DEPARTMENT OF MASS EDUCATION | 1 | 0 | 1 | 1 |
| N | EN-ENDOWMENT AND MUZRAI DEPARTMENT | 1 | 0 | 0 | 0 |
| P | EP-DEPARTMENT OF PRIMARY EDUCATION | 0 | 1 | 1003 | 0 |
| S | ES-DEPARTMENT OF SECONDARY EDUCATION | 0 | 16 | 468 | 4 |
| T | ET-DEPARTMENT OF TECHNICAL EDUCATION | 0 | 38 | 27 | 3 |
| X | EX-STATE EXCISE DEPARTMENT | 1 | 0 | 5 | 0 |
| Y | EY-DIRECTORATE OF EMPLOYMENT AND TRAINING | 0 | 2 | 52 | 2 |
| B | FB-DEPARTMENT OF FACTORIES AND BOILERS | 0 | 0 | 0 | 1 |
| | FC-DEPARTMENT OF FOOD AND CIVIL SUPPLIES | 2 | 1 | 11 | 1 |
| | FI-DEPARTMENT OF FISHERIES | 0 | 0 | 2 | 2 |
| ) | Fo-Forest Department | 0 | 2 | 18 | 5 |
| V | FW-DEPT OF HEALTH & FAMILY WELFARE | 31 | 9 | 201 | 129 |
| VI | Medical Education Institutions | 0 | 2 | 15 | 34 |
| V | GW-Directorate Of Ground Water | 0 | 0 | 1 | 0 |
| | HC-High Court Of Karnataka | 25 | 0 | 14 | 9 |
| | HG-DEPARTMENT OF HOME GUARDS, CIVIL DEFENCE AND FIRE FORCE | 0 | 0 | 3 | 0 |
| ) | HO-DEPARTMENT OF HORTICULTURE | 0 | 3 | 16 | 3 |
| B | Horticulture Boards | 0 | 1 | 0 | 0 |
| | IC-DEPARTMENT OF INDUSTRIES & COMMERCE | 1 | 2 | 1 | 0 |
| | IL-Dpar(Accounts-IRLA) | 1 | 0 | 0 | 0 |
| | IM-AYURVEDA, YOGA AND NATUROPATHY, UNANI ,SIDDHA AND HOMEOPATHY (AYUSH) | 2 | 0 | 6 | 13 |
| | IN-DEPARTMENT OF INFORMATION AND PUBLICITY | 0 | 0 | 2 | 1 |
| | IR-IRRIGATION DEPARTMENT | 0 | 0 | 3 | 0 |
| | IS-Department of ESIS Medical service | 1 | 0 | 13 | 2 |
| | KA-Karnataka State Administrative Tribunal | 0 | 0 | 1 | 5 |
| | KB-KARNATAKA BHAVAN, NEW DELHI | 0 | 1 | 2 | 0 |
| | KC-DEPARTMENT OF KANNADA AND CULTURE | 0 | 1 | 0 | 0 |
| | KG-KARNATAKA GOVT. INSURANCE DEPARTMENT | 0 | 1 | 14 | 0 |
| | LA-LEGISLATIVE ASSEMBLY SECRETARIAT | 1 | 2 | 5 | 11 |
| | LB-DEPARTMENT OF LABOUR | 0 | 0 | 5 | 1 |
| | LC-KARNATAKA LEGISLATIVE COUNCIL SECRETARIAT | 0 | 1 | 3 | 4 |
| | LI-DEPARTMENT OF PUBLIC LIBRARIES | 0 | 1 | 15 | 6 |
| | LM-CONTROLLER OF LEGAL METROLOGY | 0 | 0 | 1 | 1 |
| | LO-KARNATAKA LOKAYUKTA | 0 | 0 | 10 | 4 |
| | LR-DEPARTMENT OF SURVEY AND SETTLEMENT | 0 | 1 | 109 | 5 |
| | ME-DIRECTORATE OF HEALTH & FAMILY WELFARE | 0 | 0 | 0 | 1 |
| | MI-DEPARTMENT OF MINES AND GEOLOGY | 0 | 1 | 6 | 0 |

| DEPT_CD | DEPT_NAME | GROUP A | GROUP B | GROUP C | GROUP D |
|---|---|---|---|---|---|
| MN | MN-DEPARTMENT OF MINORITIES | 1 | 14 | 105 | 0 |
| MR | MR-DEPARTMENT OF MINOR IRRIGATION | 0 | 3 | 11 | 2 |
| MU | MU-DIRECTOR OF MUNICIPAL ADMINISTRATION | 3 | 0 | 2 | 0 |
| MV | MV-COMMISSIONER OF TRANSPORTS | 0 | 0 | 16 | 0 |
| NC | NC-N.C.C. | 0 | 0 | 7 | 6 |
| H | PH-DEPARTMENT OF PANJAYATRAJ ENGINEERING | 0 | 2 | 10 | 0 |
| I | PI-COMMISSIONER FOR PUBLIC INSTRUCTION | 0 | 4 | 37 | 2 |
| M | PM-RURAL DRINKING WATER AND SANITATION DEPARTMENT | 1 | 3 | 12 | 0 |
| N | PN-DEPARTMENT OF PROSECUTION | 0 | 2 | 2 | 0 |
| O | PO-Police Department | 0 | 5 | 59 | 9 |
| R | PR-DEPARTMENT OF PRISONS | 0 | 0 | 5 | 2 |
| S | PS-DEPARTMENT OF PRINTING AND STATIONERY | 0 | 0 | 6 | 3 |
| U | PU-PRE-UNIVERSITY BOARD | 11 | 215 | 20 | 3 |
| W | PW-PUBLIC WORKS DEPARTMENT | 3 | 38 | 30 | 5 |
| A | QA-DEPARTMENT OF AGRICULTURE | 0 | 9 | 0 | 0 |
| B | QB-DEPARTMENT OF BACKWARD CLASSES AND MINORITIES (TP) | 0 | 2 | 47 | 208 |
| E | QE-DEPARTMENT OF PUBLIC INSTRUCTIONS | 0 | 72 | 4844 | 28 |
| H | QH-DEPARTMENT OF HEALTH AND FAMILY WELFARE | 0 | 0 | 12 | 5 |
| Q | QQ-EXECUTIVE OFFICERS(TALUKA PANCHAYAT) | 0 | 1 | 401 | 0 |
| S | Qs-Department Of Social Welfare (Tp) | 1 | 0 | 93 | 50 |
| V | QV-ANIMAL HUSBANDRY AND VETERINARY SERVICES | 9 | 0 | 23 | 1 |
| W | QW-Department Of Women And Child Welfare | 1 | 3 | 80 | 0 |
| D | RD-REVENUE DEPARTMENT | 1 | 5 | 372 | 22 |
|  | SA-KARNATAKA STATE AUDIT AND ACCOUNTS DEPARTMENT | 2 | 6 | 12 | 1 |
|  | SE-COMMISSIONER FOR SERICULTURE DEVELOPMENT AND DIRECTOR OF SERICULTURE | 0 | 7 | 15 | 7 |
|  | SR-DEPARTMENT OF STAMPS AND REGISTRATION | 1 | 7 | 22 | 2 |
|  | SS-DEPARTMENT OF SMALL SAVINGS AND STATE LOTTERIES | 0 | 0 | 5 | 0 |
|  | ST-Department Of Economics And Statistics | 0 | 0 | 9 | 1 |
| V | SW-DEPARTMENT OF SOCIAL WELFARE | 0 | 0 | 2 | 0 |
|  | TA-DEPARTMENT OF TREASURIES | 1 | 3 | 45 | 0 |
|  | TL-TRANSLATION DEPARTMENT | 0 | 1 | 0 | 0 |
|  | TP-DEPARTMENT OF TOWN & COUNTRY PLANNING | 1 | 3 | 3 | 0 |
| V | TW-DIRECTORATE OF TRIBAL WELFARE | 0 | 0 | 15 | 1 |
|  | Tx-Department Of Handloom And Textile | 0 | 0 | 5 | 0 |
| A | Uda-Urban Development Authority | 1 | 0 | 0 | 0 |
| N | Krishna Bhagya Jala Nigam Ltd | 0 | 3 | 12 | 1 |
| C | Karnataka Neervari Nigam Limited | 0 | 8 | 21 | 3 |
| L | Cauvery Neeravari Nigama Ltd | 0 | 4 | 7 | 1 |
| N | Visvesvaraya Jala Nigama Limited | 0 | 3 | 4 | 0 |
| V | WW-Dept Of Women And Child Welfare | 3 | 1 | 36 | 5 |
|  | ZA-DEPARTMENT OF AGRICULTURE(ZP) | 0 | 15 | 10 | 1 |
|  | ZB-DEPARTMENT OF BACKWARD CLASSES AND MINORITIES(ZP) | 0 | 2 | 6 | 15 |
|  | ZE-DEPARTMENT OF PUBLIC INSTRUCTIONS(ZP) | 0 | 5 | 268 | 4 |
|  | Zf-Karnataka Department Of Forest(Zp) | 1 | 0 | 4 | 0 |
|  | ZH-DEPARTMENT OF HEALTH AND FAMILY WELFARE | 32 | 1 | 349 | 115 |
|  | ZI-INDUSTRIAL DEV AND DIRECTOR OF INDUSTRIES AND COMMERCE (ZP) | 0 | 1 | 0 | 0 |
|  | ZO-DEPARTMENT OF HORTICULTURE (ZP) | 2 | 4 | 25 | 0 |
|  | ZP-DEPARTMENT OF PUBLIC WORKS (ZP) | 1 | 6 | 15 | 2 |
|  | ZR-DEPARTMENT OF FISHERIES (ZP) | 0 | 2 | 2 | 0 |
|  | ZS-DEPARTMENT OF SOCIAL WELFARE (ZP) | 0 | 0 | 8 | 3 |
|  | ZU- AYURVEDA, YOGA AND NATUROPATHY, UNANI ,SIDDHA AND HOMEOPATHY (AYUSH) (ZP) | 7 | 0 | 3 | 5 |
|  | ZV-DEPARTMENT OF ANIMAL HUSBANDRY AND VETERINARY SERVICES | 4 | 3 | 26 | 3 |
|  | ZW-Women & Child Development Department (Zp) | 4 | 1 | 21 | 0 |
|  | ZZ-CHIEF EXECUTIVE OFFICER (ZILLA PANCHAYATH) | 5 | 1 | 27 | 0 |
|  | **TOTAL** | 249 | 688 | 10038 | 927 |

5

ಅನುಬಂಧ-2


# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ - ೧<br>Part - I | ಬೆಂಗಳೂರು, ಶನಿವಾರ, ೨೬,ಸೆಪ್ಟೆಂಬರ್,೨೦೨೦( ಆಶ್ವಯುಜ,೦೪, ಶಕವರ್ಷ ೧೯೪೨)<br>Bengaluru, SATURDAY, 26, SEPTEMBER, 2020( Aashwayuja,04, ShakaVarsha 1942) | ನಂ. ೪೧೫<br>No. 415 |
|---|---|---|


## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ನೇರನೇಮಕಾತಿಗಳಲ್ಲಿ ಅಂಗವಿಕಲ / ವಿಕಲಚೇತನರಿಗೆ ಕಲ್ಪಿಸಿರುವ ಸಮತಳ ಮೀಸಲಾತಿಯನ್ನು ಜಾರಿಗೊಳಿಸುವ ಬಗ್ಗೆ.

ಓದಲಾಗಿದೆ:
1. ದಿನಾಂಕ 01.08.2009ರ ಸರ್ಕಾರದ ಆದೇಶ ಸಂಖ್ಯೆ. ಸಿಆಸುಇ 128 ಸನೆನಿ 2006.
2. ದಿನಾಂಕ 10.06.2013ರ ಸರ್ಕಾರದ ಆದೇಶ ಸಂಖ್ಯೆ. ಸಿಆಸುಇ 48 ಸನೆನಿ 2012.

ಪ್ರಸ್ತಾವನೆ:

1. ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 9(1ಎ)ರಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ಮಾಡುವ ಎಲ್ಲಾ ನೇರ ನೇಮಕಾತಿಗಳಲ್ಲಿ ಅಂಗವಿಕಲರಿಗೆ / ವಿಕಲಚೇತನರಿಗೆ ಶೇಕಡ 5ರಷ್ಟು ಸಮತಳ ಮೀಸಲಾತಿಯನ್ನು ಕಲ್ಪಿಸಲಾಗಿತ್ತು. ಈ ಮೀಸಲಾತಿಯನ್ನು ಜಾರಿಗೊಳಿಸಲು ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಾದ ಪ್ರತಿಯೊಂದು ನೇರ ಮೀಸಲಾತಿಯಡಿ 20 ಬಿಂದುಗಳ ಒಂದು ರೋಸ್ಟರನ್ನು ನಿಗದಿಪಡಿಸಿ, ಅದರಲ್ಲಿ ರೋಸ್ಟರಿನ ಪ್ರತಿ 19ನೇ ಬಿಂದುವನ್ನು ಅಂಗವಿಕಲರಿಗೆ/ ವಿಕಲಚೇತನರಿಗೆ ಗುರುತಿಸಲಾಗಿತ್ತು.

2. The Persons with Disabilities (Equal Opportunity, Protection of Rights and Full Participation) Act, 1995 ಜಾರಿಗೆ ಬಂದ ನಂತರದಲ್ಲಿ ಮೇಲ್ಕಂಡ ನಿಯಮಗಳ ನಿಯಮ 9 (1ಎ)ಗೆ ದಿನಾಂಕ 03.09.2005ರ ಅಧಿಸೂಚನೆ ಸಂಖ್ಯೆ. ಡಿಪಿಎಆರ್ 50 ಎಸ್ ಆರ್ ಆರ್ 2000ದಲ್ಲಿ ತಿದ್ದುಪಡಿ ಮಾಡಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಗ್ರೂಪ್-ಎ ಮತ್ತು ಗ್ರೂಪ್-ಬಿ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಗಳಲ್ಲಿ ಅಂಗವಿಕಲರಿಗೆ/ ವಿಕಲಚೇತನರಿಗೆ ಶೇಕಡ 3ರಷ್ಟು ಹಾಗೂ ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಗಳಲ್ಲಿ ಶೇಕಡ 5ರಷ್ಟು ಸಮತಳ ಮೀಸಲಾತಿಯನ್ನು ಕಲ್ಪಿಸಲಾಗಿರುತ್ತದೆ. ಈ ಸಮತಳ ಮೀಸಲಾತಿಯನ್ನು ಜಾರಿಗೊಳಿಸಲು ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರ ಹಿಂದುಳಿದ ವರ್ಗಗಳಿಗೆ ಮೀಸಲಾದ ಪ್ರತಿಯೊಂದು ನೇರ ಮೀಸಲಾತಿಯಡಿ 20 ಬಿಂದುಗಳ ರೋಸ್ಟರನ್ನು ನಿಗದಿಪಡಿಸಿ, ಅದರಲ್ಲಿ ರೋಸ್ಟರಿನ ಪ್ರತಿ 4ನೇ ಬಿಂದುವನ್ನು ಅಂಗವಿಕಲರಿಗೆ ಗುರುತಿಸಲಾಗಿರುತ್ತದೆ.



www.ksge.in

3. ಮೇಲೆ (1)ರಲ್ಲಿ ಓದಲಾದ ದಿನಾಂಕ 01.08.2009ರ ಆದೇಶದಲ್ಲಿ, ರಾಜ್ಯ ಸಿವಿಲ್ ಸೇವೆಗಳಲ್ಲಿನ ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಗಳಲ್ಲಿ ನಿಗದಿಪಡಿಸಿರುವ ಶೇಕಡ 5ರ ಮೀಸಲಾತಿಯಲ್ಲಿ ಶೇ.2ನ್ನು ದೃಷ್ಟಿಮಾಂದ್ಯತೆಯುಳ್ಳವರಿಗೆ, ತಲಾ ಶೇ.1ನ್ನು ಶ್ರವಣ ದೋಷವುಳ್ಳವರಿಗೆ, ಚಲನವಲನ ವೈಕಲ್ಯವುಳ್ಳವರಿಗೆ ಮತ್ತು ಕುಷ್ಠರೋಗದಿಂದ ಗುಣಮುಖರಾದ ಅಂಗವಿಕಲರಿಗೆ/ ಬುದ್ಧಿಮಾಂದ್ಯತೆ/ ಮಾನಸಿಕ ಅಸ್ವಸ್ಥತೆ (Mental retardation/ Mental illness) ಹೊಂದಿರುವವರಿಗೆ ಮೀಸಲಿರಿಸಲು ಆದೇಶಿಸಲಾಗಿರುತ್ತದೆ. ಈ ಮೀಸಲಾತಿಯನ್ನು ಜಾರಿಗೊಳಿಸಲು ದಿನಾಂಕ 04.01.2008ರ ಆದೇಶ ಸಂಖ್ಯೆ: ಸಿಆಸುಇ 53 ಸೆನನಿ 2007ರಲ್ಲಿ ನಿಗದಿಪಡಿಸಿರುವ 20 ಬಿಂದುಗಳ ರೋಸ್ಟರನ್ನು 100 ರಿಕ್ತ ಸ್ಥಾನಗಳಿಗೆ ಅನ್ವಯಿಸಿ, ಅದರಲ್ಲಿ 4, 24ನೇ ಬಿಂದುಗಳನ್ನು ದೃಷ್ಟಿಮಾಂದ್ಯತೆಯುಳ್ಳವರಿಗೆ, 44ನೇ ಬಿಂದುವನ್ನು ಶ್ರವಣ ದೋಷವುಳ್ಳವರಿಗೆ, 64ನೇ ಬಿಂದುವನ್ನು ಚಲನವಲನ ವೈಕಲ್ಯ ಇರುವವರಿಗೆ ಮತ್ತು 84ನೇ ಬಿಂದುವನ್ನು ಕುಷ್ಠರೋಗದಿಂದ ಗುಣಮುಖರಾದ ಅಂಗವಿಕಲರಿಗೆ/ ಬುದ್ಧಿಮಾಂದ್ಯತೆ/ ಮಾನಸಿಕ ಅಸ್ವಸ್ಥತೆ ಹೊಂದಿರುವವರಿಗೆ ಮೀಸಲಿರಿಸತಕ್ಕದ್ದೆಂದು ಮತ್ತು ಈ ಬಿಂದುಗಳೆದುರು ನಿರ್ದಿಷ್ಟಪಡಿಸಿದ ಅಂಗವಿಕಲ/ ವಿಕಲಚೇತನ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ, ಬೇರೆ ಅಂಗವಿಕಲತೆ / ವಿಕಲಚೇತನ ಇರುವವರನ್ನು ಆಯ್ಕೆಗೆ ಪರಿಗಣಿಸತಕ್ಕದ್ದೆಂದು ಆದೇಶಿಸಲಾಗಿರುತ್ತದೆ.

4. ಮೇಲೆ (2)ರಲ್ಲಿ ಓದಲಾದ ದಿನಾಂಕ: 10.06.2013ರ ಆದೇಶದಲ್ಲಿ, ದಿನಾಂಕ: 05.09.2005ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 107 ಸೆನನಿ 2005ನ್ನು ಪರಿಷ್ಕರಿಸಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಗ್ರೂಪ್-ಎ ಮತ್ತು ಗ್ರೂಪ್-ಬಿ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಗಳಲ್ಲಿ ಅಂಗವಿಕಲರಿಗೆ/ ವಿಕಲಚೇತನರಿಗೆ ಕಲ್ಪಿಸಿರುವ ಶೇಕಡ 3ರಷ್ಟು ಸಮತಳ ಮೀಸಲಾತಿಯೂ ಒಳಗೊಂಡಂತೆ ಇತರ ಸಮತಳ ಮೀಸಲಾತಿಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಸಾಮಾನ್ಯ ಅರ್ಹತೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರತಿ ಹಿಂದುಳಿದ ವರ್ಗಗಳಿಗೆ ಪ್ರತ್ಯೇಕವಾಗಿ ಲಭ್ಯವಾಗುವ ಪ್ರತಿ ನೂರರ ಒಂದು ಸಮೂಹದಲ್ಲಿ ಪ್ರತಿ 4, 44 ಮತ್ತು 84ನೇ ರೋಸ್ಟರ್ ಬಿಂದುಗಳನ್ನು ಅಂಗವಿಕಲ/ ವಿಕಲಚೇತನ ಅಭ್ಯರ್ಥಿಗಳಿಗೆ ಮೀಸಲಿರಿಸತಕ್ಕದ್ದೆಂದು ಆದೇಶಿಸಲಾಗಿದೆ. 4ನೇ ಬಿಂದುವನ್ನು ದೃಷ್ಟಿಮಾಂದ್ಯ (blindness or low vision), 44ನೇ ಬಿಂದುವನ್ನು ಶ್ರವಣದೋಷ (hearing impairment) ಮತ್ತು 84ನೇ ಬಿಂದುವನ್ನು ಚಲನವಲನ ವೈಕಲ್ಯ (locomotor disability or cerebral palsy) ಅಂಗವಿಕಲತೆ ಹೊಂದಿರುವವರಿಗೆ ಮೀಸಲಿರಿಸತಕ್ಕದ್ದೆಂದು ಮತ್ತು ಒಂದು ವೇಳೆ ಈ ಬಿಂದುಗಳೆದುರು ನಿರ್ದಿಷ್ಟಪಡಿಸಿದ ಅಂಗವಿಕಲತೆಯುಳ್ಳ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಗುರುತಿಸಲಾದ ಬೇರೆ ಅಂಗವಿಕಲತೆಯುಳ್ಳವರನ್ನು ಈ ಬಿಂದುಗಳೆದುರು ಆಯ್ಕೆಗೆ ಪರಿಗಣಿಸತಕ್ಕದ್ದೆಂದು ಆದೇಶಿಸಲಾಗಿರುತ್ತದೆ. ಸದರಿ ಆದೇಶವು ಭವಿಷ್ಯವರ್ತಿಯಾಗಿ ಜಾರಿಗೆ ಬಂದಿರುತ್ತದೆ. ಈ ಆದೇಶದ ಪೂರ್ವದಲ್ಲಿ ದಿನಾಂಕ: 05.09.2005ರ ಆದೇಶದನ್ವಯ ನಿಗದಿಪಡಿಸಿರುವ ರೋಸ್ಟರನ್ನು ಜಾರಿಗೊಳಿಸಿದ್ದಲ್ಲಿ, ಪ್ರತಿ ವರ್ಗದಡಿಯಲ್ಲಿ ಸಮತಳ ಮೀಸಲಾತಿ ರೋಸ್ಟರಿನ 4ನೇ ಬಿಂದುವನ್ನು ದಾಟಿದ್ದಲ್ಲಿ, 20ನೇ ಬಿಂದುವನ್ನು ತಲುಪದಿದ್ದಲ್ಲಿ, 20ನೆಯ ಬಿಂದುವಿನವರೆಗೆ ಆ ರೋಸ್ಟರನ್ನು ಚಾಲನಗೊಳಿಸತಕ್ಕದ್ದೆಂದು ಹಾಗೂ ನಂತರದಲ್ಲಿ ಒಂದನೇ ಬಿಂದುವಿನಿಂದ ಈ ಆದೇಶದಂತೆ ರೋಸ್ಟರನ್ನು ಚಾಲನಗೊಳಿಸತಕ್ಕದ್ದೆಂದು ಸದರಿ ಆದೇಶದಲ್ಲಿ ಆದೇಶಿಸಲಾಗಿರುತ್ತದೆ.

5. The Rights of Persons with Disabilities Act, 2016ರ ಕಲಂ 34(1)ರಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ಎಲ್ಲಾ ನೇರ ನೇಮಕಾತಿಗಳಲ್ಲಿ ಅಂಗವಿಕಲರಿಗೆ ಶೇಕಡ 4ರಷ್ಟು ಕಡಿಮೆ ಇಲ್ಲದಂತೆ ಸಮತಳ ಮೀಸಲಾತಿಯನ್ನು ಕಲ್ಪಿಸುವಂತೆ ನಿರ್ದೇಶನ ನೀಡಲಾಗಿರುತ್ತದೆ. ಸದರಿ ಕಲಂನ್ನು ಕೆಳಗೆ ಉದ್ಧರಿಸಲಾಗಿದೆ:

*"34. (1) Every appropriate Government shall appoint in every Government establishment, not less than four per cent of the total number of vacancies in the cadre strength in each group of posts meant to be filled with persons with benchmark disabilities of which, one per cent, each shall be reserved for persons with benchmark disabilities under clauses (a), (b) and (c) and one per cent for persons with benchmark disabilities under clauses (d) and (e), namely:*

www.ksge.in

*(a) blindness and low vision;*
*(b) deaf and hard of hearing;*
*(c) locomotor disability including cerebral palsy, leprosy cured, dwarfism, acid attack victims and muscular dystrophy;*
*(d) autism, intellectual disability, specific learning disability and mental illness;*
*(e) multiple disabilities from amongst persons under clauses (a) to (d) including deaf-blindness in the posts identified for each disabilities.*

*Provided that the reservation in promotion shall be in accordance with such instructions as are issued by the appropriate Government from time to time:*

*Provided further that the appropriate Government, in consultation with the Chief Commissioner or the State Commissioner, as the case may be, may, having regard to the type of work carried out in any Government establishment, by notification and subject to such conditions, if any, as may be specified in such notifications exempt any Government establishment from the provisions of this section."*

ಮೇಲ್ಕಂಡ ಅಧಿನಿಯಮದ ಕಲಂ 34(1)ರ ಅನ್ವಯದನ್ವಯ, ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ಕ್ಕೆ ದಿನಾಂಕ: 29.08.2020ರ ಅಧಿಸೂಚನೆ ಸಂಖ್ಯೆ :ಸಿಆಸುಇ 149 ಸೇನೆನಿ 2020ರಲ್ಲಿ ತಿದ್ದುಪಡಿ ಮಾಡಿ, ನಿಯಮ 2ರಲ್ಲಿ 'Person with Disability' ಎಂಬುದನ್ನು ಪರಿಭಾಷಿಸಲಾಗಿದೆ ಮತ್ತು ನಿಯಮ 9(1ಎ)ರಡಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಗ್ರೂಪ್-ಎ ಮತ್ತು ಗ್ರೂಪ್-ಬಿ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಗಳಲ್ಲಿ ಅಂಗವಿಕಲರಿಗೆ/ ವಿಕಲಚೇತನರಿಗೆ ಕಲ್ಪಿಸಿದ್ದ ಶೇಕಡ 3 ರಷ್ಟು ಮೀಸಲಾತಿಯನ್ನು ಶೇಕಡ 4 ರಷ್ಟಕ್ಕೆ ಹೆಚ್ಚಿಸಲಾಗಿದೆ ಮತ್ತು ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಗಳಲ್ಲಿ ಈಗಾಗಲೇ ಜಾರಿಯಲ್ಲಿರುವ ಶೇಕಡ 5ರಷ್ಟು ಸಮತಳ ಮೀಸಲಾತಿಯನ್ನು ಮುಂದುವರಿಸಲಾಗಿರುತ್ತದೆ. ಬದಲಾದ ಈ ಸನ್ನಿವೇಶದಲ್ಲಿ, ಮೇಲೆ ಓದಲಾದ ದಿನಾಂಕ: 01.08.2009ರ ಮತ್ತು 10.06.2013ರ ಆದೇಶಗಳನ್ನು ಮಾರ್ಪಡಿಸುವುದು ಅಗತ್ಯವಾಗಿರುತ್ತದೆ.

6. ಮುಂದುವರೆದು, ಈ ಮೊದಲು ವೃಂದ-ಸಿ ಮತ್ತು ವೃಂದ-ಡಿ ಹುದ್ದೆಗಳ ನೇರ ನೇಮಕಾತಿಯಲ್ಲಿ ಅಂಧತ್ವ / ಮಂದದೃಷ್ಟಿ ಇರುವ ವ್ಯಕ್ತಿಗಳಿಗೆ ನೀಡಲಾಗುತ್ತಿದ್ದ ಶೇಕಡ 2 ರಷ್ಟು ಮೀಸಲಾತಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು ಮದುಳಿನ ಪಾರ್ಶ್ವವಾಯು, ಕುಷ್ಠರೋಗ ನಿವಾರಿತ ವ್ಯಕ್ತಿಗಳು, ಕುಬ್ಜತೆ, ಆಸಿಡ್ ದಾಳಿಗೆ ತುತ್ತಾದವರು ಮತ್ತು ಬಹುವಿಧ ಸ್ನಾಯು ಸವತ ಒಳಗೊಂಡಂತೆ ಚಲನವಲನ ವೈಕಲ್ಯತೆ ಉಳ್ಳವರಿಗೆ ನೀಡಲು ಶಿಫಾರಸ್ಸು ಮಾಡಿರುತ್ತದೆ. ಇಲಾಖೆಯು 2001 ಮತ್ತು 2011 ರ ಜನಗಣತಿಯಲ್ಲಿ ಲಭ್ಯವಾದ ಅಂಗವೈಕಲ್ಯತೆವಾರು ದತ್ತಾಂಶವನ್ನು ತುಲನಾತ್ಮಕವಾಗಿ ಪರಿಗಣಿಸಿರುತ್ತದೆ. 1991 ರ ಜನಗಣತಿಯ ಸಂದರ್ಭದಲ್ಲಿ ಅಂಗವೈಕಲ್ಯತೆವಾರು ಗಣತಿ ನಡೆಸಿರುವುದಿಲ್ಲ. ರಾಜ್ಯದಲ್ಲಿ ದೃಷ್ಟಿದೋಷವುಳ್ಳ ಅಂಗವಿಕಲರ ಸಂಖ್ಯೆಯು 2001 ರ ಜನಗಣತಿಯ 4,40,875 ಕ್ಕೆ ಹೋಲಿಸಿದರೆ 2011 ರ ಜನಗಣತಿಯಲ್ಲಿ 2,64,170 ಕ್ಕೆ ಪರಿಣಾಮಕಾರಿಯಾಗಿ ಕುಸಿದಿರುತ್ತದೆ. ಆದರೆ ದೈಹಿಕ ಅಂಗವಿಕಲರ ಸಂಖ್ಯೆ 2001 ರಲ್ಲಿ 2,66,559 ಇದ್ದು, 2011 ರಲ್ಲಿ 2,71,982 ಕ್ಕೆ ಹೆಚ್ಚಳಗೊಂಡಿರುತ್ತದೆ. ಅಲ್ಲದೇ 'ಇತರೆ ಅಂಗವಿಕಲತೆ' ಮತ್ತು 'ಬಹುವಿಧದ ಅಂಗವಿಕಲತೆ' ಎಂಬ ವಿಭಾಗಗಳ ಅಡಿಯಲ್ಲಿಯೂ ಸಹ ದೈಹಿಕ ಅಂಗವಿಕಲ ವ್ಯಕ್ತಿಗಳನ್ನು ಪ್ರತ್ಯೇಕವಾಗಿ ಗಣತಿ ಮಾಡಲಾಗಿರುತ್ತದೆ. ಆದಕಾರಣ, ಇಲಾಖೆಯ ನಿರ್ದೇಶಕರು ದೈಹಿಕ ಅಂಗವಿಕಲರ ಒಟ್ಟು ಸಂಖ್ಯೆಯನ್ನು 4,45,348 ಎಂದು ಪರಿಗಣಿಸಬಹುದಾಗಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಅಂದರೆ 2011 ರ ಜನಗಣತಿಯ ಸಂದರ್ಭದಲ್ಲಿ ಕರ್ನಾಟಕ

www.ksge.in

ರಾಜ್ಯದ ಒಟ್ಟು ಜನಸಂಖ್ಯೆ 6,10,95,297 ಆಗಿದ್ದು, ಅದರಲ್ಲಿ ಶೇಕಡ 0.43 ರಷ್ಟು ದೃಷ್ಟಿದೋಷವುಳ್ಳ ಅಂಗವಿಕಲರು ಹಾಗೂ ಶೇಕಡ 0.73 ರಷ್ಟು ದೈಹಿಕ ಅಂಗವಿಕಲರು ಇರುತ್ತಾರೆ.

ಮೇಲಿನ ಅಂಶಗಳನ್ನು ಪರಿಗಣಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 149 ಎಸ್‌ಆರ್‌ಆರ್ 2020**
**ಬೆಂಗಳೂರು, ದಿನಾಂಕ:25.09.2020**

7. ರಾಜ್ಯ ಸಿವಿಲ್ ಸೇವೆಗಳಲ್ಲಿನ ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಗಳಲ್ಲಿ ಅಂಗವಿಕಲರಿಗೆ / ವಿಕಲಚೇತನರಿಗೆ ನಿಗದಿಪಡಿಸಿರುವ ಶೇಕಡ 5ರ ಸಮತಳ ಮೀಸಲಾತಿಯನ್ನು The Rights of Persons with Disabilities Act, 2016ರ ಕಲಂ 34(1)ರಲ್ಲಿ ಗೊತ್ತುಪಡಿಸಲಾದಂತೆ ಈ ಕೆಳಕಂಡ ವಿಕಲಚೇತನ ಅಭ್ಯರ್ಥಿಗಳಿಗಾಗಿ ಕೆಳಕಂಡ ಪ್ರಮಾಣದಲ್ಲಿ ಗುರುತಿಸತಕ್ಕದ್ದೆಂದು ಹಾಗೂ ಈ ಮೀಸಲಾತಿಯನ್ನು ಜಾರಿಗೊಳಿಸಲು ದಿನಾಂಕ:04.01.2008ರ ಆದೇಶ ಸಂಖ್ಯೆ: ಸಿಆಸುಇ 53 ಸನೆನಿ 2007 ರಲ್ಲಿ ನಿಗದಿಪಡಿಸಿರುವ 20 ಬಿಂದುಗಳ ರೋಸ್ಟರನ್ನು 100 ರಿಕ್ತ ಸ್ಥಾನಗಳಿಗೆ ಅನ್ವಯಿಸಿ, ಈ ಕೆಳಗೆ ಗುರುತಿಸಲಾದ ಬಿಂದುಗಳಲ್ಲಿ ಅನುಕ್ರಮವಾಗಿ ಮೀಸಲಿರಿಸತಕ್ಕದ್ದು ಎಂದು ಈ ಮೂಲಕ ಆದೇಶಿಸಲಾಗಿದೆ:

| ಕ್ರಮ ಸಂಖ್ಯೆ | ವೈಕಲ್ಯತೆಯ ಸ್ವರೂಪ | ಗುರುತಿಸಲಾದ ಶೇಕಡವಾರು | ಗುರುತಿಸಲಾದ ಬಿಂದು |
|---|---|---|---|
| 1 | Blindness and low vision | 1% | 4 |
| 2 | Locomotor disability including cerebral palsy, leprosy cured, dwarfism, acid attack victims and muscular dystrophy | 2% | 24 ಮತ್ತು 84 |
| 3 | Deaf and hard of hearing | 1% | 44 |
| 4 | Autism, intellectual disability, specific learning disability and mental illness | 1% | 64 |
| 5 | Multiple disabilities from amongst persons under clauses (a) to (d) including deaf-blindness in the posts identified for each disabilities | | |

8. ರಾಜ್ಯ ಸಿವಿಲ್ ಸೇವೆಗಳಲ್ಲಿನ ಗ್ರೂಪ್-ಎ ಮತ್ತು ಗ್ರೂಪ್-ಬಿ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಗಳಲ್ಲಿ ವಿಕಲಚೇತನರಿಗೆ ಕಲ್ಪಿಸಿರುವ ಶೇಕಡ 4 ರಷ್ಟು ಸಮತಳ ಮೀಸಲಾತಿಯನ್ನು The Rights of Persons with Disabilities Act, 2016ರ ಕಲಂ 34(1)ರಲ್ಲಿ ಗೊತ್ತುಪಡಿಸಲಾದಂತೆ ಈ ಕೆಳಕಂಡ ವಿಕಲಚೇತನ ಅಭ್ಯರ್ಥಿಗಳಿಗಾಗಿ ಕೆಳಕಂಡ ಪ್ರಮಾಣದಲ್ಲಿ ಗುರುತಿಸತಕ್ಕದ್ದೆಂದು ಹಾಗೂ ಈ ಮೀಸಲಾತಿಯನ್ನು ಜಾರಿಗೊಳಿಸಲು ದಿನಾಂಕ: 04.01.2008ರ ಆದೇಶ ಸಂಖ್ಯೆ: ಸಿಆಸುಇ 53 ಸನೆನಿ 2007ರಲ್ಲಿ ನಿಗದಿಪಡಿಸಿರುವ 20 ಬಿಂದುಗಳ ರೋಸ್ಟರನ್ನು 100 ರಿಕ್ತ ಸ್ಥಾನಗಳಿಗೆ ಅನ್ವಯಿಸಿ, ಈ ಕೆಳಗೆ ಗುರುತಿಸಲಾದ ಬಿಂದುಗಳಲ್ಲಿ ಅನುಕ್ರಮವಾಗಿ ಮೀಸಲಿರಿಸತಕ್ಕದ್ದು ಎಂದು ಈ ಮೂಲಕ ಆದೇಶಿಸಲಾಗಿದೆ:

www ksge in

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| ಕ್ರಮ ಸಂಖ್ಯೆ | ವೈಕಲ್ಯತೆಯ ಸ್ವರೂಪ | ಗುರುತಿಸಲಾದ ಶೇಕಡವಾರು | ಗುರುತಿಸಲಾದ ಬಿಂದು |
|---|---|---|---|
| 1 | Blindness and low vision | 1% | 4 |
| 2 | Locomotor disability including cerebral palsy, leprosy cured, dwarfism, acid attack victims and muscular dystrophy | 1% | 24 |
| 3 | Deaf and hard of hearing | 1% | 44 |
| 4 | Autism, intellectual disability, specific learning disability and mental illness | 1% | 64 |
| 5 | Multiple disabilities from amongst persons under clauses (a) to (d) including deaf-blindness in the posts identified for each disabilities | | |

9. ಒಂದು ವೇಳೆ ಅಧಿಸೂಚಿಸಿರುವ ಅಂಗವಿಕಲತೆ ಹೊಂದಿರುವ ಅಭ್ಯರ್ಥಿ ಲಭ್ಯವಿಲ್ಲದೇ ಇದ್ದಲ್ಲಿ ಅಂತಹ ರಿಕ್ತ ಸ್ಥಾನವನ್ನು ಮುಂದಿನ ನೇಮಕಾತಿಗೆ ಮುಂದಕ್ಕೊಯ್ಯತಕ್ಕದ್ದು (Carry forward). ಮುಂದಿನ ನೇಮಕಾತಿಯಲ್ಲಿಯೂ ಅಧಿಸೂಚಿತ ಅಂಗವಿಕಲತೆ ಹೊಂದಿರುವ ಅಭ್ಯರ್ಥಿ ಲಭ್ಯವಿಲ್ಲದೇ ಇದ್ದಲ್ಲಿ, ನೇರ ಮೀಸಲಾತಿಯಡಿ ಬರುವ ಆಯಾ ಪ್ರವರ್ಗದ ಇತರ ಅಂಗವಿಕಲತೆಯುಳ್ಳ ಅರ್ಹ ಅಂಗವಿಕಲ ಅಭ್ಯರ್ಥಿಯಿಂದ ಭರ್ತಿ ಮಾಡತಕ್ಕದ್ದು. ಒಂದು ವೇಳೆ ಯಾವುದೇ ಅಂಗವಿಕಲ ಅಭ್ಯರ್ಥಿ ಲಭ್ಯವಿಲ್ಲದಿದ್ದಲ್ಲಿ, ಆಯಾ ಪ್ರವರ್ಗದ ಇತರ ಅರ್ಹ ಅಭ್ಯರ್ಥಿಯಿಂದ ಭರ್ತಿ ಮಾಡಿಕೊಳ್ಳತಕ್ಕದ್ದೆಂದು ಎಲ್ಲ ನೇಮಕಾತಿ ಪ್ರಾಧಿಕಾರಗಳಿಗೆ ಸೂಚಿಸಲಾಗಿದೆ.

10. ಈ ಆದೇಶವು ಭವಿಷ್ಯವರ್ತಿಯಾಗಿ ಜಾರಿಗೆ ಬರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎ.ವಿ. ಶೈಲಜ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು-2).

www.ksge.in

ಅನುಬಂಧ - 3

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿಶೇಷ ಚೇತನ (ಅಂಗವಿಕಲ) ಸಿಬ್ಬಂದಿಗಳಿಗೆ ಮಿದು (ಫ್ಲೆಕ್ಸಿ) ಸಮಯ ಜಾರಿಗೊಳಿಸುವ ಬಗ್ಗೆ.

****

ಪ್ರಸ್ತಾವನೆ:

6ನೇ ರಾಜ್ಯ ವೇತನ ಆಯೋಗವು ಎಲ್ಲಾ ವಿಧದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಶೇಷ ಚೇತನ (ಅಂಗವಿಕಲ) ಸಿಬ್ಬಂದಿಗಳು ಕಚೇರಿಗೆ ಬಂದು ಹೋಗಲು ಎದುರಿಸುತ್ತಿರುವ ತೊಂದರೆಗಳನ್ನು ಗಮನದಲ್ಲಿರಿಸಿ, ಆಯೋಗವು ವಿಶೇಷ ಚೇತನ (ಅಂಗವಿಕಲ) ಸಿಬ್ಬಂದಿಗಳಿಗೆ ಅವರುಗಳು ಭೋಜನದ ಸಮಯದಲ್ಲಿ ಮತ್ತು ಕಚೇರಿಯ ವೇಳೆಯ ನಂತರವೂ ಕರ್ತವ್ಯ ನಿರ್ವಹಿಸುವ ಷರತ್ತಿಗೊಳಪಟ್ಟು, ವಿಶೇಷ ಚೇತನ ಸಿಬ್ಬಂದಿಗಳು ನಿಗದಿತ ಕಚೇರಿ ವೇಳೆಗಿಂತ ಒಂದು ಗಂಟೆ ತಡವಾಗಿ ಕೆಲಸಕ್ಕೆ ಹಾಜರಾಗಲು ಅನುಮತಿಸುವಂತೆ ಆಯೋಗವು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತದೆ. 6ನೇ ವೇತನ ಆಯೋಗದ ಮೇಲ್ಕಂಡ ಶಿಫಾರಸ್ಸನ್ನು ಸಚಿವ ಸಂಪುಟ ಸಭೆಯಲ್ಲಿ ಪರಿಶೀಲಿಸಿ, ನಿರ್ಣಯ ಕೈಗೊಂಡಿದ್ದು, ವಿಶೇಷ ಚೇತನ (ಅಂಗವಿಕಲ) ಸಿಬ್ಬಂದಿಗಳಿಗೆ ಮಿದು (ಫ್ಲೆಕ್ಸಿ) ಸಮಯವನ್ನು ಜಾರಿಗೊಳಿಸಲು ನಿರ್ಧರಿಸಲಾಗಿರುತ್ತದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶದ ಸಂಖ್ಯೆ: ಸಿಆಸುಇ 04 ಕತವ 2019**
**ಬೆಂಗಳೂರು, ದಿನಾಂಕ: 08.02.2019**

ರಾಜ್ಯದ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ವಿವಿಧ ವೃಂದ ಮತ್ತು ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿಶೇಷ ಚೇತನ (ಅಂಗವಿಕಲ)ಸಿಬ್ಬಂದಿಗಳಿಗೆ ದಿನಾಂಕ:01.02.2019 ರಿಂದ ಜಾರಿಗೆ ಬರುವಂತೆ ಅವರುಗಳು ಭೋಜನ ಸಮಯದಲ್ಲಿ ಮತ್ತು ಕಚೇರಿಯ ವೇಳೆಯ ನಂತರವೂ ಕತ್ಯರ್ವ ನಿರ್ವಹಿಸುವ ಷರತ್ತಿಗೊಳಪಟ್ಟು ನಿಗದಿತ ಕಚೇರಿ ವೇಳೆಗಿಂತ ಒಂದು ಗಂಟೆ ತಡವಾಗಿ ಕರ್ತವ್ಯಕ್ಕೆ ಹಾಜರಾಗಲು ಮಿದು ಸಮಯವನ್ನು (ಫ್ಲೆಕ್ಸಿ) ಜಾರಿಗೆ ತರಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

8/2/19

(ಕೆ.ರವೀಂದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಡಳಿತ ಸುಧಾರಣೆ-ತಪಾಸಣೆ)

8/2/19

ಗೆ,

ಸರ್ಕಾರದ ಎಲ್ಲಾ ಅಪರ ಮುಖ್ಯ/ಪ್ರಧಾನ/ಕಾರ್ಯದರ್ಶಿಗಳು

ಅನುಬಂಧ-4

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿಕಲಚೇತನ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016 ಉಪನಿಯಮ (72)ರಡಿ ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸುವ ಬಗ್ಗೆ.

ಓದಲಾಗಿದೆ:
1. ವಿಕಲಚೇತನ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016 ದಿನಾಂಕ:28.12.2016ರ ಉಪನಿಯಮ-72
2. ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016ರ ರಾಜ್ಯ ನಿಯಮಾವಳಿ ಅಧಿಸೂಚನೆ ಸಂಖ್ಯೆ:ಡಬ್ಲ್ಯೂಸಿಡಿ 209 ಪಿಹೆಚ್‌ಪಿ 2017 (ಭಾಗ-2), ದಿ:30.08.2019.

***

**ಪ್ರಸ್ತಾವನೆ:**

ವಿಕಲಚೇತನ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016ನ್ನು ಕೇಂದ್ರ ಸರ್ಕಾರವು ದಿನಾಂಕ:28.12.2016 ರಿಂದ ಜಾರಿಗೆ ಬರುವಂತೆ ಅನುಷ್ಠಾನಗೊಳಿಸಿದ್ದು, ಅಧಿನಿಯಮದ ಕಲಂ-72ರ ಪ್ರಕಾರ ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಬೇಕಾಗಿರುತ್ತದೆ.

ಅಧಿಸೂಚನೆ ಸಂಖ್ಯೆ:ಡಬ್ಲ್ಯೂಸಿಡಿ 209 ಪಿಹೆಚ್‌ಪಿ 2017 (ಭಾಗ-2), ದಿ:30.08.2019ರಲ್ಲಿ ವಿಕಲಚೇತನ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016ಕ್ಕೆ ರಾಜ್ಯ ನಿಯಮಾವಳಿಗಳನ್ನು ರೂಪಿಸಿದ್ದು, ಸದರಿ ನಿಯಮಾವಳಿಯ ಕಲಂ-28ರಲ್ಲಿ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಲು ಹಾಗೂ ಸದರಿ ಸಮಿತಿಯಲ್ಲಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಉಪಾಧ್ಯಕ್ಷರನ್ನಾಗಿ ಹಾಗೂ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳನ್ನು ಸಮಿತಿಯ ಸದಸ್ಯರನ್ನಾಗಿ ಹಾಗೂ ಜಿಲ್ಲೆಯಲ್ಲಿ ವಿಕಲಚೇತನರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಇಬ್ಬರು ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿಗಳನ್ನು ಹಾಗೂ ವಿಕಲಚೇತನರ ಹಕ್ಕುಗಳ ಅಧಿನಿಯಮ-2016 ಕಲಂ-2ರ ಪ್ರಕಾರ ಸೂಚಿಸಿರುವಂತೆ 5 ಜನಕ್ಕಿಂತ ಕಡಿಮೆ ಇಲ್ಲದಂತೆ ವಿಕಲಚೇತನ ವ್ಯಕ್ತಿಗಳನ್ನು ಜಿಲ್ಲಾ ಮಟ್ಟದ ಸಮಿತಿಗೆ ನಾಮನಿರ್ದೇಶನ ಮಾಡಲು ಅವಕಾಶವಿರುತ್ತದೆ.

ಆದ್ದರಿಂದ ವಿಕಲಚೇತನ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016 ಕಲಂ-72 ಹಾಗೂ ರಾಜ್ಯ ನಿಯಮಾವಳಿ 28ರನ್ವಯ ಪದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಕೆಳಕಂಡಂತೆ ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಿ ಆದೇಶಿಸಿದೆ.

28/10/19

**ಸರ್ಕಾರದ ಆದೇಶ ಸಂಖ್ಯೆ:ಮಮಇ 145 ಪಿಹೆಚ್‌ಪಿ 2019, ಬೆಂಗಳೂರು, ದಿ:22.10.2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ವಿಕಲಚೇತನ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016 ಕಲಂ-72 ಹಾಗೂ ರಾಜ್ಯ ನಿಯಮಾವಳಿ ಕಲಂ-28ರನ್ವಯ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸದಸ್ಯರನ್ನೊಳಗೊಂಡ ವಿಕಲಚೇತನರ ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಿ ಆದೇಶಿಸಿದೆ.

| ಕ್ರಸಂ | ಪದನಾಮ | ಪದಾಧಿಕಾರಿಗಳು |
|---|---|---|
| 1 | ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2 | ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು. | ಉಪಾಧ್ಯಕ್ಷರು. |
| 3 | ಜಿಲ್ಲಾ ಆರಕ್ಷಕ ಅಧೀಕ್ಷಕರು | ಪದನಿಮಿತ್ತ ಸದಸ್ಯರು |
| 4 | ಜಿಲ್ಲಾ ಶಸ್ತ್ರ ಚಿಕಿತ್ಸಕರು ಅಥವಾ ವೈದ್ಯಕೀಯ ಅಧೀಕ್ಷಕರು | ಪದನಿಮಿತ್ತ ಸದಸ್ಯರು |

..2

| | | |
|---|---|---|
| 5 | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು | ಪದನಿಮಿತ್ತ ಸದಸ್ಯರು |
| 6 | ಮನೋವೈದ್ಯರು, ಜಿಲ್ಲಾ ಆಸ್ಪತ್ರೆ | ಪದನಿಮಿತ್ತ ಸದಸ್ಯರು |
| 7 | ಜಿಲ್ಲಾ ಪಬ್ಲಿಕ್ ಪ್ರಾಸಿಕ್ಯೂಟರ್ | ಪದನಿಮಿತ್ತ ಸದಸ್ಯರು |
| 8 | ಕಾರ್ಯದರ್ಶಿಗಳು, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ | ಪದನಿಮಿತ್ತ ಸದಸ್ಯರು |
| 9 | ವಿಕಲಚೇತನರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಇಬ್ಬರು ಸ್ವಯಂ ಸೇವಾ ಪ್ರತಿನಿಧಿಗಳನ್ನು ಜಿಲ್ಲಾಧಿಕಾರಿಗಳು ನಾಮನಿರ್ದೇಶನ ಮಾಡುವುದು. | ಸದಸ್ಯರು |
| 10 | ವಿಕಲಚೇತನ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016 ಕಲಂ-2 ರಲ್ಲಿ ಸೂಚಿಸಿರುವಂತೆ, ವಿವಿಧ ಬಗೆಯ ಐವರು ವಿಕಲಚೇತನರನ್ನು ಮೀರದಂತೆ ಜಿಲ್ಲಾಧಿಕಾರಿಗಳು ನಾಮನಿರ್ದೇಶನ ಮಾಡುವುದು | ಸದಸ್ಯರು |
| 11 | ಅಧ್ಯಕ್ಷರು ಸೂಚಿಸುವ ಯಾವುದೇ ಸದಸ್ಯರು | ಸದಸ್ಯರು |
| 12 | ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರ ಹುದ್ದೆಯ ಶ್ರೇಣಿಯ ಕಡಿಮೆ ಇಲ್ಲದ ಪ್ರತಿನಿಧಿ | ಸದಸ್ಯರು |
| 13 | ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, | ಸದಸ್ಯರು |
| 14 | ಉಪನಿರ್ದೇಶಕರು, ಶಿಕ್ಷಣ ಇಲಾಖೆ | ಸದಸ್ಯರು |
| 15 | ಉಪನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ | ಸದಸ್ಯರು |
| 16 | ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಮತ್ತು ಬಂದರು ಇಲಾಖೆ, | ಸದಸ್ಯರು |
| 17 | ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು | ಸದಸ್ಯ ಕಾರ್ಯದರ್ಶಿಗಳು |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ. ರಾಜಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು(ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
3. ಪ್ರಧಾನ ಮಹಾಲೇಖಪಾಲರು(ಎ&ಇ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ",ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001.
4. ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು
5. ರಾಜ್ಯ ಆಯುಕ್ತರು, ಅಂಗವಿಕಲ ವ್ಯಕ್ತಿಗಳ ಅಧಿನಿಯಮ ಕಛೇರಿ, ಶೇಷಾದ್ರಿಪುರಂ, ಬೆಂಗಳೂರು
6. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು
7. ಎಲ್ಲಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್
8. ಎಲ್ಲಾ ಜಿಲ್ಲೆಯ ಉಪ ನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

9. ಎಲ್ಲಾ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
10. ಸಂಬಂಧಿಸಿದ ಸದಸ್ಯರುಗಳಿಗೆ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಮೂಲಕ
11. ಮಾನ್ಯ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ ಬೆಂಗಳೂರು
12. ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
13. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿ ಕಟ್ಟಡ ಬೆಂಗಳೂರು.
14. ಸರ್ಕಾರದ ಉಪ ಕಾರ್ಯದರ್ಶಿಗಳು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಸಹಾಯಕರು, ಬಹುಮಹಡಿ ಕಟ್ಟಡ, ಬೆಂಗಳೂರು
15. ಶಾಖಾ ಕಡತ/ಒಡಿಬಿಸಿ/ಹೆಚ್ಚುವರಿ ಪ್ರತಿಗಳು

ಅನುಬಂಧ - 5

## ಅನುಬಂಧ – 05

| ಕ್ರ.ಸಂಖ್ಯೆ | ದಿನಾಂಕ | ಹೆಸರು | ವಿಷಯ |
|---|---|---|---|
| 1. | 05-04-2022 | ಡಾ॥ ಉದಯ್ ಕುಮಾರ್ ಪಿ. ಮುಖ್ಯ ಪಶುವೈದ್ಯಾಧಿಕಾರಿ, ಬೀದರ್ ಜಿಲ್ಲೆ | ಇವರ ವರ್ಗಾವಣೆ ಬಗ್ಗೆ |
| 2. | 19-02-2022 | ಶ್ರೀಮತಿ ನಂದಿನಿ ಎಸ್.ಕುಮಾರಿ | ಇವರನ್ನು ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕಿಗೆ ವರ್ಗಾವಣೆ ಮಾಡುವ ಬಗ್ಗೆ |
| 3. | 06-04-2022 | ರವಿ.ಪಿ.ಗಾದ್ರಿ, ಬೆಂಗಳೂರು | ಪದವೀಧರ ಪ್ರಾಥಮಿಕ ಶಿಕ್ಷಕರ ನೇಮಕಾತಿ ಪರೀಕ್ಷೆಯಲ್ಲಿ ಅಂಗವಿಕಲ ಅಭ್ಯರ್ಥಿಗಳಿಗೆ ಸೂಕ್ತ ಸೌಲಭ್ಯಗಳನ್ನು ಒದಗಿಸಿಕೊಡುವ ಬಗ್ಗೆ |
| 4. | 11-04-2022 | ಸಿ.ಕೆ.ಜೈಕಿರಣ್ ಸಿ.ಡಿ.ಪಿ.ಓ ಹಾಸನ | ಬೇಲೂರು ಸಿ.ಡಿ.ಪಿ.ಓ ರವರ ಅಕ್ರಮದ ಬಗ್ಗೆ |
| 5. | 11-04-2022 | ಸಿ.ಕೆ.ಜೈಕಿರಣ್ ಸಿ.ಡಿ.ಪಿ.ಓ ಹಾಸನ | ಎಫ್.ಐ.ಆರ್.ಮಾಡಿ ವರ್ಗಾವಣೆ ಮಾಡಿರುವ ದೂರಿನ ಬಗ್ಗೆ |
| 6. | 11-04-2022 | ಸಿ.ಕೆ.ಜೈಕಿರಣ್ ಸಿ.ಡಿ.ಪಿ.ಓ ಹಾಸನ | ಇವರನ್ನು ಹಾಸನಕ್ಕೆ ವರ್ಗಾವಣೆ ಮಾಡುವ ಬಗ್ಗೆ |
| 7. | 12-04-2022 | ಶ್ರೀಮತಿ ಸಿ.ಜಿ.ಸುಜಾತ , ಬಳ್ಳಾರಿ | ಶ್ರೀ ದಿವಂಗತ ಸಿ.ಜಿ.ಮಲ್ಲಪ್ಪ ಅಂಗವಿಕಲರು ಇವರ ವೇತನ ಮತ್ತು ಸೇವಾ ಸೌಲಭ್ಯಗಳನ್ನು ಪಡೆಯುವ ಬಗ್ಗೆ |
| 8. | 07-03-2022 | ಶ್ರೀ ಗೋವಿಂದ ರಾಜು ಎಂ.ಕೆ. ಚಾಮರಾಜನಗರ ಜಿಲ್ಲೆ | ವೇತನ ನೀಡುವ ಬಗ್ಗೆ |
| 9. | 11-04-2022 | ಸ್ವಾಮಿ ಲಿಂಗಪ್ಪ ಎಲ್ ಬಿನ್ ಲಕ್ಷ್ಮಪ್ಪ ದೇವರಳ್ಳಿ, ಚನ್ನಗಿರಿ ತಾ॥ ದಾವಣಗೆರೆ ಜಿಲ್ಲೆ | ಇವರನ್ನು ಕೆಲಸದಿಂದ ತೆಗೆದುಹಾಕಿರುವ ದೂರಿನ ಬಗ್ಗೆ |
| 10. | 06-04-2022 | ಶ್ರೀಮತಿ ಭಾರತಿ ಆರ್. | ಇವರ ದೂರಿನ ಬಗ್ಗೆ |
| 11. | 19-04-2022 | ಶ್ರೀಗಣೇಸುಲ್ಲಾ, ಶ್ರೀನಿವಾಸ್ ಆರ್.ಬಿ.ಐ ಮೈಸೂರು | ಇವರ ವರ್ಗಾವಣೆ ಬಗ್ಗೆ |
| 12. | 21-04-2022 | ಶ್ರೀಮತಿ ಕನಕಮ್ಮ, ಬೆಂಗಳೂರು | ಇವರಿಗೆ ಪಿಂಚಣಿ ನೀಡುವ ಬಗ್ಗೆ |
| 13. | 20-04-2022 | ಶ್ರೀ ಕೆ.ಯೇಸುಬಾಬು, ಬಳ್ಳಾರಿ ಜಿಲ್ಲೆ | ಕರ್ತವ್ಯದ ಸ್ಥಳದಲ್ಲಿ ತೊಂದರೆಯಾಗಿರುತ್ತಿರುವ ದೂರಿನ ಬಗ್ಗೆ |
| 14. | 25-04-2022 | ರವಿ ಸಹಾಯಕ ಸಾಂಖ್ಯಿಕ ಅಧಿಕಾರಿ ಮೈಸೂರು ಜಿಲ್ಲೆ | ಇವರ ವೈದ್ಯಕೀಯ ವೆಚ್ಚದ ಬಿಲ್ಲನ್ನು ಮರುಪಾವತಿಸುವ ಬಗ್ಗೆ |
| 15. | 26-04-2022 | ಶ್ರೀ ಉಮೇಶ್ | ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ |
| 16. | 22-04-2022 | ರಾಮಲಿಂಗಾರೆಡ್ಡಿ ಶಾಸಕರು | ರವಿಚಂದ್ರ ಬಿನ್ ಅಶ್ವಥಯ್ಯ ಇವರಿಗೆ ಗುತ್ತಿಗೆ ಆಧಾರದ ಮೇಲೆ ನೌಕರಿ ನೀಡುವ ಬಗ್ಗೆ |
| 17. | 25-04-2022 | ಶ್ರೀ ಬಸವರಾಜು ಬಿ.ಸಿ. ಶಿವಮೊಗ್ಗ | ಇವರ ಪಿಂಚಣಿ ಹಣ ಬಿಡುಗಡೆ ಮಾಡುವ ಬಗ್ಗೆ |
| 18. | 29-04-2022 | ಶ್ರೀ ರಮೇಶ ಸಿ.ಬಿರಾದಾರ್, ವಿಜಯಪುರ ಜಿಲ್ಲೆ | ಇವರ ದೂರಿನ ಬಗ್ಗೆ |
| 19. | 30-04-2022 | ಸುಶ್ಮಾ ಕೆ. ತಂದೆ ಕೃಷ್ಣ ಮೂಡಾರಿ ಉಡುಪಿ ಜಿಲ್ಲೆ | ಕೆ.ಪಿ.ಎಸ್.ಸಿ.ಯಲ್ಲಿ ಅನ್ಯಾಯವಾದ ದೂರಿನ ಬಗ್ಗೆ |
| 20. | 04-05-2022 | ಶ್ರೀ ಬಿ.ಆರ್.ಶಿವರಾಜ್ , ಬೆಂಗಳೂರು | ವಿಕಲಚೇತನ ಸರ್ಕಾರಿ ನೌಕರರ ಸಮಸ್ಯೆಗಳ ದೂರಿನ ಬಗ್ಗೆ |
| 21. | 07-05-2022 | ಜೀವನ್ ಸಂತೋಷ್ ಮಾರ್ಟೀಸ್, ನಿರ್ವಾಹಕರು, ಪುತ್ತೂರು ವಿಭಾಗ | ಕರ್ತವ್ಯದ ದಿನಗಳೆಂದು ಪರಿಗಣಿಸಲು ಆದೇಶ ನೀಡುವ ಬಗ್ಗೆ |

| | | | |
|---|---|---|---|
| 22. | 12-05-2022 | ಸಂತೋಷ್ ಕುಮಾರ್ ಮತ್ತು ಗುಣಪಾಲ್ ಅಂಚೆ ಕಛೇರಿ, ಮಂಗಳೂರು | ಕರ್ತವ್ಯದ ಸ್ಥಳದಲ್ಲಿ ತೊಂದರೆ ನೀಡುತ್ತಿರುವ ದೂರಿನ ಬಗ್ಗೆ |
| 23. | 15-05-2022 | ಓ.ರಮೇಶ್, ಮಂಜುನಾಥ್, ಬೆಂಗಳೂರು | ಡಾಟಾ ಎಂಟ್ರಿ ಆಪರೇಟರ್ ರವರಿಗೆ ಮಾನಸಿಕ ಕಿರುಕುಳ ನೀಡುತ್ತಿರುವ ಬಗ್ಗೆ |
| 24. | 13-05-2022 | ಡಿ.ಕೃಷ್ಣ, ಮಾರ್ಗದಾಳು, ಮೆಸ್ಕಾಂ ಸಖರಾಯಪಟ್ಟಣ ಪೋಸ್ಟ್, ಚಿಕ್ಕಮಗಳೂರು | ಕಾಲಕಾಲಕ್ಕೆ ನೀಡಬೇಕಾದ ಬಡ್ತಿಯನ್ನು ಮತ್ತು ವೇತನ ಹೆಚ್ಚಳದ ಹಿಂಬಾಕಿಯನ್ನು ನೀಡದಿರುವ ಬಗ್ಗೆ |
| 25. | 18-05-2022 | ಅಂಧ ವಿಶೇಷ ಶಿಕ್ಷಕರ ಒಕ್ಕೂಟ ವಿನಾಯಕ ನಗರ, ಮೈಸೂರು | ಮಹದೇವಸ್ವಾಮಿ ಎಂಬ ಅಂಧ ಶಿಕ್ಷಕರಿಗೆ ಅಗೌರವ ತೋರಿ ಅವಮಾನಿಸಿರುವ ಬಗ್ಗೆ |
| 26. | 21-05-2022 | ಬಾಬುಗೌಡ ಮಲ್ಲನಗೌಡ ಪಾಟೀಲ, ನಗರ ಯೊಜನಾ ಪ್ರಾಧಿಕಾರ, ಸೇಡಂ-585222 | ಸಿಬ್ಬಂದಿಗಳಿಗೆ ನೀಡಬಹುದಾದ ಮಿದು ಸಮಯ ಸೌಲಭ್ಯವನ್ನು ಮಂಜೂರು ಮಾಡುವ ಬಗ್ಗೆ |
| 27. | 24-05-2022 | ಶ್ರೀ. ಬಸವರಾಜು ಹೊಳವಾರ | ಮುಂಬಡ್ತಿ ಮಾರ್ಗಸೂಚಿ ಕಳುಹಿಸಿರುವ ಈ ಮೇಲ್ |
| 28. | 17-05-2022 | ಶ್ರೀ ಸುನೀಲಕುಮಾರ ತಂದೆ ಮೋಹನರಾವ್ ಶಿಂಧೆ ಬೀದರ | ಶ್ರೀ ಸುನೀಲಕುಮಾರ ತಂದೆ ಮೋಹನರಾವ್ ಶಿಂಧೆ ಇವರಿಗೆ ನೇಮಕಾತಿ ಆದೇಶ ನೀಡುವ ಬಗ್ಗೆ. |
| 29. | 19-05-2022 | ಸುನಿತಾ ಜಾನ್ ಮೂಡಲಗಿ, ಮನೆ ನಂ:4450/ಬಿ, ಚವ್ಹಾಟ ಗಲ್ಲಿ, ಬೆಳಗಾವಿ | ಅಂಗವಿಕಲ ಶಿಕ್ಷಕರಾದ ಶ್ರೀಮತಿ ಸುನಿತಾ ಜಾನ್ ಮೂಡಲಗಿ ಇವರ ಮುಂಬಡ್ತಿಯಲ್ಲಿ ತಾರತಮ್ಯ ಮಾಡಿರುವ ಕುರಿತು |
| 30. | 23-05-2022 | ಶ್ರೀ ಆತ್ಮಾನಂದ ಬಿ ಗೋಸಲ (ಪ್ರ ದ ಸ), ಕಡಬ ತಾಲ್ಲೂಕು ಕಚೇರಿ, ಕಡಬ ತಾ॥ ದ.ಕ.ಜಿಲ್ಲೆ. | ನನಗೆ ಪ್ರ.ದ.ಸ ದಿಂದ ಉಪತಹಶೀಲ್ದಾರರ ಭಡ್ತಿಯನ್ನು ನೀಡದೆ ಇರುವ ಕುರಿತು |
| 31. | 21-05-2022 | ನೀಲಮ್ಮ ಸಿ ಎಲ್, ಮಳೂರು ಹೋಬಳಿ, ಚನ್ನಪಟ್ಟಣ ತಾ॥ ರಾಮನಗರ ಜಿಲ್ಲೆ | ಮುದುಗೆರೆ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರ ನಿರ್ಲಕ್ಷತನ ಬೇಜವಾಬ್ದಾರಿಯಿಂದ ಗರ್ಭಿಣಿ ಹೊಟ್ಟೆಯಲ್ಲಿರುವ 8 ತಿಂಗಳ ಗಂಡು ಮಗು ಮರಣ ಹೊಂದಿರುವ ಬಗ್ಗೆ |
| 32. | 23-05-2022 | ಟಿ.ಸಿ.ಸಂಜಯ್ ಕುಮಾರ್, ಪ್ರಥಮ ದರ್ಜೆ ಸಹಾಯಕರು, ಪಶುಪಾಲನಾ ಇಲಾಖೆ, ಮೈಸೂರು, | ಜಂಟಿ ನಿರ್ದೇಶಕರು ರವರ ಕಛೇರಿಯಲ್ಲಿ ಪ್ರ ದ ಸ ಕಾರ್ಯನಿರ್ವಹಿಸುತ್ತಿದ್ದು ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳದಲ್ಲೇ ಮುಂದುವರೆಸುವ ಬಗ್ಗೆ. |
| 33. | 30-05-2022 | ಡಾ॥ಉದಯಕುಮಾರ.ಪಿ, ಮುಖ್ಯ ಪಶುವೈದ್ಯಾಧಿಕಾರಿ, ಬೀದರ | ನನ್ನ ವರ್ಗಾವಣೆಯನ್ನು ರದ್ದುಪಡಿಸಿ ಮೂಲಸ್ಥಾನದಲ್ಲೆ ಮುಂದುವರೆಸುವ ಬಗ್ಗೆ |
| 34. | 02-06-2022 | ರವಿ ಪಿ ಗಾದ್ರಿ, ಕರ್ನಾಟಕ ರಾಜ್ಯ ಸರ್ಕಾರಿ ಅಂಧ ನೌಕರರ ಸಂಘ, ಬೆಂಗಳೂರು | ಅಂಗವಿಕಲ ನೌಕರರಿಗೆ ಮುಂಬಡ್ತಿಯಲ್ಲಿ ಮೀಸಲಾತಿ ಕಲ್ಪಿಸುವಂತೆ ಕೋರಿ |
| 35. | 01-06-2022 | ಶಿವ್ ರಾಥೋಡ್, ಇ-ಮೇಲ್ ಮನವಿ | ವಿಕಲಚೇತನ ಅಧಿಕಾರಿ ಕೋರಿಕೆಯ ಮೇರಗೆ ವರ್ಗಾವಣೆ ಮನವಿ |
| 36. | 04-05-2022 | ಎನ್.ಕೆ ವಿಜಯನಿರ್ಮಲ, ಸೂಪರ್ವೈಸರ್, ಸಿಡಿಪಿಯು ಆಫೀಸ್, ಚಿಂತಾಮಣಿ. | ಮೇಲ್ವಿಚಾರಕಿ ಶ್ರೀಮತಿ ವಿಜಯನಿರ್ಮಲ ಎಂಬುವವರು ನೀಡುತ್ತಿರುವ ಕಿರುಕುಳದ ಬಗ್ಗೆ ಕಾರಣ ಕೇಳುವ ನೋಟೀಸ್ ಗೆ ಉತ್ತರಿಸುವ ಬಗ್ಗೆ |
| 37. | 31-05-2022 | ಮಂಜವ್ವ ಚೌವ್ಹಾಣ್, ಸಹಾಯಕ | ವಿಕಲಚೇತನ ಅಧಿಕಾರಿಯ ಕೋರಿಕೆಯ ಮೇರಗೆ |

| | | | |
|---|---|---|---|
| | | ಸಾಂಖ್ಯಿಕ ಅಧಿಕಾರಿ, ಕೊಪ್ಪಳ | ವರ್ಗಾವಣೆ ಬಗ್ಗೆ |
| 38. | 03-06-2022 | ದಿವಾಕರ, ಶಾಖಾಧೀಕ್ಷಕರು, ಪೊಲೀಸ್ ಆಯುಕ್ತರ ಕಚೇರಿ, ಮೈಸೂರು ನಗರ. | ರಾಜ್ಯ ಸರ್ಕಾರಿ ವಿಕಲಚೇತನ ನೌಕರರಿಗೆ ಮುಂಬಡ್ತಿಯಲ್ಲಿ ಮೀಸಲಾತಿ ನೀಡುವ ಬಗ್ಗೆ |
| 39. | 6-06-2022 | ತುಕಾರಾಮ.ಎಸ್.ಲಮಾಣಿ, ಸಹ ಶಿಕ್ಷಕರು, ಬಾಗಲಕೋಟೆ | ನಿಯೋಜನೆಗೊಳಿಸಲು ನಿರ್ದೇಶನ ನೀಡುವ ಕುರಿತು |
| 40. | 8-06-2022 | ಪ್ರಧಾನ ವ್ಯವಸ್ಥಾಪಕರು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು | ಶ್ರೀ ಪುರಂದರದಾಸ್ ರವರ ವಿರುದ್ಧದ ಇಲಾಖಾ ವಿಚಾರಣೆಯ ಅಂತಿಮ ಆದೇಶದ ಕುರಿತು |
| 41. | 14-06-2022 | ಎಸ್.ರವಿಕುಮಾರ್, ಜನರಲ್ ಮ್ಯಾನೇಜರ್(ಪಿಪಿ)ಭಾರತೀಯ ರಿಸರ್ವ್ ಬ್ಯಾಂಕ್ ಬನ್ನೇರುಘಟ್ಟ ರೋಡ್ ಬೆಂಗಳೂರು | ಶ್ರೀ ಗಣೇಶುಲ ಶ್ರೀನಿವಾಸು, ಮ್ಯಾನೇಜರ್, ಫಿನಿಷಿಂಗ್ ಡಿವಿಷನ್, ಮೈಸೂರು ರಿಕ್ವೆಸ್ಟ್ ಫಾರ್ ಸ್ಟಾರ್ ಆಫ್ ಟ್ರಾನ್ಸ್ಫರ್ |
| 42. | 15-06-2022 | ಡಾ|ರಿಚರ್ಡ್ ವಿನ್ಸೆಂಟ್ ಡಿಸೋಜ, ಕಾರ್ಯದರ್ಶಿಗಳು, ಕರ್ನಾಟಕ ಲೋಕ ಸೇವಾ ಆಯೋಗ. ಬೆಂಗಳೂರು | ಪ್ರಥಮ ದರ್ಜೆ ಸಹಾಯಕರ ಹುದ್ದೆಗಳ ನೇಮಕಾತಿಗಾಗಿ ಹೊರಡಿಸಿರುವ ಅಧಿಸೂಚನೆಗಳಲ್ಲಿ ಬಹುವಿಧ ವಿಕಲಚೇತನರಿಗೆ ಮೀಸಲಾತಿ ಕಲ್ಪಿಸದಿರುವ ಬಗ್ಗೆ |
| 43. | 20-06-2022 | ಶ್ರೀ ಶಿವರಾಜ್ ಟಿ.ಆರ್, ರಾಜ್ಯಶಾಸ್ತ್ರ ಉಪನ್ಯಾಸಕರು, ಸ ಪ ಪೂ ಕಾಲೇಜು, ಕೆ.ಆರ್.ಪುರಂ, ಬೆಂಗಳೂರು | ಬೋಧಕೇತರ ಹುದ್ದೆಗೆ ಇಲಾಖೆಯ ಬದಲಾವಣೆ ಮಾಡಿಕೊಡಲು ಸಂಬಂಧಿಸಿದವರಿಗೆ ಶಿಫಾರಸ್ಸು ಮಾಡಲು ಕೋರಿ ಮನವಿ |
| 44. | 17-06-2022 | ವಿಭಾಗೀಯ ನಿಯಂತ್ರಣಾಧಿಕಾರಿ, ಕರಾರಸಾ ನಿಗಮ, ಕೋಲಾರ. | ಶ್ರೀ ನವೀನ್‌ಕುಮಾರ್ ಪಿ, ಕೋಲಾರ ರವರಿಗೆ ಲಘು ಕೆಲಸದ ಕುರಿತು ವಿವರಣೆ ಸಲ್ಲಿಸುತ್ತಿರುವ ಬಗ್ಗೆ |
| 45. | 23-06-2022 | ಡಿ.ಆರ್.ಸಿರಿಗೌರಿ, ಐಪಿಎಸ್, ಪೊಲೀಸ್ ಅಧೀಕ್ಷರು, ರೈಲ್ವೆಸ್, ಬೆಂಗಳೂರು | ಹಿಂಬರಹ, ಶ್ರೀ ಮಲ್ಲಿಕಾರ್ಜುನ, ಆರ್ಪಿಸಿ-434, ರರಾಯಚೂರು ರೈಲ್ವೇ ಪೊಲೀಸ್ ಠಾಣೆಯವರಿಗೆ ಸರ್ಕಾರಿ ಸೇವಾ ಆರ್ಥಿಕ ಸೌಲಭ್ಯ ನೀಡಿರುವ ಬಗ್ಗೆ |
| 46. | 5-11-2018 | ಬಿ.ಎಸ್.ಸುವರ್ಣ, ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು | ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247-ಎ ರ ಸೌಲಭ್ಯವನ್ನು ಮಂಜೂರು ಮಾಡುವ ಅಧಿಕಾರವನ್ನು ಇಲಾಖಾ ಮುಖ್ಯಸ್ಥರುಗಳಿಗೆ ನೀಡುವ ಬಗ್ಗೆ |
| 47. | 30-06-2022 | (ಎಸ್. ನಾಗಲಕ್ಷ್ಮಿ) ಹಾಗೂ ಹೆಚ್. ಶಂಕರ್ ಆಂಗ್ಲ ಶಿಕ್ಷಕರು, ಇಂದಿರಾನಗರ, ಬಳ್ಳಾರಿ. | ಕೊಪ್ಪಳ ಜಿಲ್ಲೆ ಗಂಗಾವತಿ ವಲಯದ ಅಬಕಾರಿ ನಿರೀಕ್ಷಕರ ಕಚೇರಿಯಲ್ಲಿ ಸಿಬ್ಬಂದಿಯೇ ಅನೈತಿಕ ಚಟುವಟಿಕೆ ನಡೆಸಿರುವ ಬಗ್ಗೆ |
| 48. | 11-07-2022 | ಶ್ರೀ ಮಂಜುನಾಥ.ಡಿ.ಎಲ್, ನಗರ ಮತ್ತು ಗ್ರಾ ಯೊ ಸ ನಿ , ನೆಲಮಂಗಲ | ಅಂಅನಿ 2016 ರ ಅಂಗವಿಕಲ ನೌಕರರ ವರ್ಗಾವನೆ ಸಂಭಂದಿತ ಹೊರಡಿಸಿರುವ ಆದೇಶಗಳನ್ನು ಉಲ್ಲಂಘಿಸಿರುವ ಬಗ್ಗೆ. |
| 49. | 12-07-2022 | ಅನಿತಾ, ರಾಮಮೂರ್ತಿನಗರ, ಬೆಂಗಳೂರು | ಬಾಲರಾಜ್ ಚಾಲಕರು ಬಿಎಂಟಿಸಿ ಹೆಣ್ಣೂರು ಡಿಪೋ ಇವರು ನೀಡುತ್ತಿರುವ ಮಾನಸಿಕ ಹಿಂಸೆ ಬಗ್ಗೆ |
| 50. | 14-07-2022 | ಶ್ರೀ ಸೂರ್ಯಕಾಂತ್ ಗುಗ್ಗವಾಡ, ಕಲಬುರಗಿ | ಸಂಪೂರ್ಣ ಅಂಧನಾದ ನನಗೆ ಹೆಚ್.ಕೆ.ಇ ಸಂಸ್ಥೆಯ ಸಿಬ್ಬಂದಿಗಳಿಂದ ಆಗುತ್ತಿರುವ ಅನಗತ್ಯ ಕಿರುಕುಳವನ್ನು ತಪ್ಪಿಸಿ ಸಮರ್ಪಕವಾಗಿ ಕರ್ತವ್ಯ |

| | | | |
|---|---|---|---|
| | | | ನಿರ್ವಹಿಸಲು ಅವಕಾಶ ಮಾಡಿಕೊಡಲು ಮನವಿ ಅರ್ಜಿ |
| 51. | 16-07-2022 | ಬಿ.ಎಂ.ವಿಜಯಸಿಂಹ, ಮೊಬಲೈಜರ್, ಬಸವೇಶ್ವರನಗರ, ಬೆಂಗಳೂರು | ಸಮರ್ಥನಂ ಅಂಗವಿಕಲರ ಸಂಸ್ಥೆಯಿಂದ ಜುಲೈ 2021 ರಿಂದ ಈವರೆಗೆ ವೇತನ ಬಿಡುಗಡೆ ಮಾಡದಿರುವ ಬಗ್ಗೆ. |
| 52. | 13-07-2022 | ಉಪನಿರ್ದೇಶಕರು, ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ, ಚಾಮರಾಜನಗರ ಜಿಲ್ಲೆ | ಶ್ರೀ ಬಸವಣ್ಣ ಎಂ, ಸಹ ಶಿಕ್ಷಕರು ಇವರಿಗೆ ಸ್ಥಳ ನಿಯುಕ್ತಿಗೊಳಿಸುವ ಬಗ್ಗೆ. |
| 53. | 19-07-2022 | ಸುತ್ರಾಯ ಸುಧಾಕರ, ಲಾಲಾ ಮಕಾನ್, ಬಳ್ಳಾರಿ | ಪ್ರಕರಣ ದಾಖಲು ಮಾಡಿಕೊಳ್ಳುವ ಬಗ್ಗೆ |
| 54. | 20-07-2022 | ಶ್ರೀ ಸುಧಾಕರ ಸುತ್ರಾಯ ಬಳ್ಳಾರಿ | ಕ್ಯೂ ಕನೆಕ್ಟ್ ಕಂಪನಿಯವರು ಆಕ್ಟ್ ರೂಲ್ಸನ್ನು ಫಾಲೋ ಮಾಡದಿರುವ ಬಗ್ಗೆ |
| 55. | 26-07-2022 | ವಿನಾಯಕ ಪಾಂಡುರಂಗ ಪಾಟೀಲ್, ಚಿಕ್ಕೋಡಿ, ಬೆಳಗಾವಿ ಜಿಲ್ಲೆ. | ಸಾರಿಗೆ ಇಲಾಖೆಯಲ್ಲಿ ತೊಂದರೆಯಾದ ದೂರಿನ ಬಗ್ಗೆ ಮನವಿ |
| 56. | 20-06-2022 | ಬಾಲಸುಬ್ರಮಣ್ಯಂ, ಜೆ.ಪಿ.ನಗರ, ಮೈಸೂರು | ಎಸ್.ವಿ ಸೂರ್ಯಕುಮಾರ್ ಇವರು ಪೊಲೀಸ್ ಠಾಣಾಗೆ ನೀಡಿದ ಮಾಹಿತಿ |
| 57. | 27-07-2022 | ಶ್ರೀ ಸಂಗಪ್ಪ ತುಕಾರಾಂ ಹಡಪದ್, ಮುಖ್ಯ ಅಡುಗೆಯವರು, ವಿಜಯಪುರ ಜಿಲ್ಲೆ. | ಸದರಿ ಅಂಧ ನೌಕರರನ್ನು ಅಡುಗೆ ಕೆಲಸದಿಂದ ಕಛೇರಿ ಕೆಲಸಕ್ಕೆ ನಿಯುಕ್ತಿಗೊಳಿಸುವ ಬಗ್ಗ |
| 58. | 01-08-2022 | ಕುಮಾರಿ ಅಶ್ವಿನಿ ಎಂ. ಧೋಗಡಿ, ನೇಕಾರ ನಗರ, ಹಳೇ ಹುಬ್ಬಳ್ಳಿ, ಧಾರವಾಡ ಜಿಲ್ಲೆ. | ಕೆಲಸ ಕೊಡಿಸಿಕೊಡುವ ಬಗ್ಗೆ. |
| 59. | 01-08-2022 | ಬಸವಣ್ಣ ಸಹ ಶಿಕ್ಷಕ, ಸ.ಹಿ.ಪ್ರಾ.ಶಾಲೆ, ಯರಿಯೂರು, ಚಾಮರಾಜನಗರ ಜಿಲ್ಲೆ. | ನ್ಯಾಯ ಕೊಡಿಸಿಕೊಡುವ ಬಗ್ಗೆ |
| 60. | 16-10-2022 | ಶ್ರೀಮತಿ ಬೇಬಿ ಶೆಟ್ಟಿ, ಉಡುಪಿ ಜಿಲ್ಲೆ | ದಿನಾಂಕ:29-10-2022 ರ ಪತ್ರದ ಹಿಂಬರಹ ಪತ್ರಕ್ಕೆ ಆಕ್ಷೇಪಣೆ ಸಲ್ಲಿಸುವ ಬಗ್ಗೆ |
| 61. | 17-11-2022 | ಅಂಬರೀಷ ಎಸ್.ಮಂಗಲಗಿ, ನೇಹರು ಗಂಜ, ಕಲಬುರಗಿ | ಕಲಬುರಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಅಫಜಲಪೂರ, ಇಲ್ಲಿನ ವರ್ಗಾವಣೆ ರದ್ದುಪಡಿಸಿ ಸ್ಥಳೀಯ ವಿಕಲಚೇತನರನ್ನು ನೇಮಕ ಮಾಡಬೇಕೆಂದು ತಮ್ಮಲ್ಲಿ ಮನವಿ |
| 62. | 23-11-2022 | ಮಲ್ಲಿಕಾರ್ಜುನ ಎಂ. ಸರಗೂರು ಮೋ. ಕೊಳ್ಳೇಗಾಲ ತಾ॥ ಚಾಮರಾಜನಗರ ಜಿಲ್ಲೆ | ಸೇವೆಯಲ್ಲಿರುವಾಗ ಅಂಗವಿಕಲನಾಗಿರುವ ನನಗೆ ಎಲ್ಲಾ ಸೌಲಭ್ಯಗಳನ್ನು ನೀಡುವಂತೆ ಕೋರಿ ಮನವಿ |
| 63. | 25-11-2022 | ಶ್ರೀ ಗಂಗಪ್ಪ ಹಾದಿಮನಿ, ಚಾ/ನಿ ವಿಜಯಪುರ ವಿಭಾಗ ವಿಜಯಪುರ | ಶಾಶ್ವತ ಹಗುರವಾದ ಪರ್ಯಾಯ ಹುದ್ದೆಯಲ್ಲಿ ನಿಯೋಜಿಸುವುದು ಅಥವಾ ಹುದ್ದೆ ಬದಲಾವಣೆ ಮಾಡುವ ಕುರಿತು |
| 64. | 29-11-2022 | ಜಿ. ಶೇಖರಪ್ಪ, ನಿವೃತ್ತ ಅಂಗವಿಕಲರು ಹರಪನಹಳ್ಳಿ ವಿಜಯನಗರ ಜಿಲ್ಲೆ | ಕ್ಷೇತ್ರ ಶಿಕ್ಷಣಾಧಿಕಾರಿಗಳ ಅಧಿಕಾರಿಗಳು ದುರುದ್ದೇಶ ಪೂರ್ವಕವಾಗಿ ಗಳಿಕೆ ರಜೆಗಳನ್ನು ನಮೂದಿಸದೆ ಕಿರುಕುಳ ಕೊಡುತ್ತಿರುವ ಬಗ್ಗೆ ದೂರು |
| 65. | 03-12-2022 | ಅಕ್ಕಮ್ಮ ತಂದೆ ಹನುಮಂತಪ್ಪ, ಹಿರೇಸಿಂಧಗಿ, ಕೊಪ್ಪಳ ಜಿಲ್ಲೆ | 2022ರ ಶಾಲಾ ಶಿಕ್ಷಕರ ನೇಮಕಾತಿ ಬಗ್ಗೆ |

| | | | |
|---|---|---|---|
| 66. | 07-12-2022 | ಮಹೇಶ್ ವಂಟಿಗಾರ, ಸಾ॥ ದನಕದೊಡ್ಡಿ, ಕೊಪ್ಪಳ ಜಿಲ್ಲೆ | 2022ರ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಅಂಗವಿಕಲ ಮೀಸಲಾತಿಯಲ್ಲಿ ಆಗಿರುವ ಅನ್ಯಾಯದ ಬಗ್ಗೆ |
| 67. | 07-12-2022 | ಶ್ರೀಮತಿ ಕೆ.ವಾಣಿ, ಹುಬ್ಬಳ್ಳಿ | ನಿವೃತ್ತಿ ವೇತನವನ್ನು ಕೊಡದೇ ಸತಾಯಿಸುತ್ತಿರುವ ಬಗ್ಗೆ ದೂರು |
| 68. | 12-12-2022 | ಮಾಂತಗೌಡ ಬಿರಾದಾರ್, ಯಾದಗಿರಿ | 2022 ಪದವೀಧರ ಶಿಕ್ಷಕರ ನೇಮಕಾತಿಯಲ್ಲಿ ಅಂಗವಿಕಲ ಮೀಸಲಾತಿಯಲ್ಲಿ ರಾಜ್ಯಾದ್ಯಂತ ಅಂಗವಿಕಲ ಅಭ್ಯರ್ಥಿಗಳಿಗೆ ಆಗಿರುವ ಅನ್ಯಾಯದ ಕುರಿತು |
| 69. | 12-12-2022 | ಶ್ರೀ ಶಾಂತಪ್ಪ. ಜಿ. ಕಾರಬಾಸಗಿ, ಜಿಲ್ಲಾ ಸಮಿತಿ ಸಮಾಜ (ರಿ) | ಕಲಬುರಗಿ ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳು ವಿಕಲಚೇತನರನ್ನು ಆಯ್ಕೆ ಸಮಿತಿ ಮೂಲಕ ನೇಮಕ ಮಾಡದೇ ಇರುವ ಬಗ್ಗೆ ದೂರು ಅರ್ಜಿ |
| 70. | 09-12-2022 | ಮಹೇಶ್ ವಂಟಿಗಾರ, ಸಾ॥ ದನಕದೊಡ್ಡಿ, ಕೊಪ್ಪಳ ಜಿಲ್ಲೆ | 2022ರ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಅಂಗವಿಕಲ ಮೀಸಲಾತಿಯಲ್ಲಿ ಆಗಿರುವ ಅನ್ಯಾಯದ ಬಗ್ಗೆ |
| 71. | 29-11-2022 | ಶ್ರೀ ಮಾಂತೇಶ್ ಜಿ.ಕೆ.ಸಮರ್ಥನಂ ಅಂಗವಿಕಲರ ಸಂಸ್ಥೆ, ಬೆಂಗಳೂರು | ಶ್ರೀ ಬಿ.ಎಂ. ವಿಜಯಸಿಂಹನಿಂದ ಅವರ 9 ತಿಂಗಳ ಅವಧಿಯ ವೇತನ ಪಾವತಿಸುವ ಕುರಿತು |
| 72. | 14-12-2022 | ಶ್ರೀ ಕಾಶಿನಾಥ್ ಶಿರಿಗೇರಿ ಸಹ ಶಿಕ್ಷಕರು ಕೊಪ್ಪಳ | ಸರ್ಕಾರಿ ಅಂಗವಿಕಲ ಶಿಕ್ಷಕರಿಗೆ ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಹೆಚ್ಚುವರಿ ಮಾಡುವ ಸಂದರ್ಭದಲ್ಲಿ ಆದ್ಯತೆ ಮತ್ತು ವಿನಾಯತಿಯನ್ನು ಸೇವಾವಧಿಯಲ್ಲೇ ಒಂದೇ ಬಾರಿ ಮಾಡಿರುವುದರ ಬಗ್ಗೆ |
| 73. | 14-12-2022 | ಶ್ರೀ ರವಿಕುಮಾರ್ ಆರ್.ಎಸ್.ಶಿಕ್ಷಕರು ರಾಯಚೂರು | ಸರ್ಕಾರಿ ಶಾಲಾ ಶಿಕ್ಷಕರ ವರ್ಗಾವಣೆ ಹಾಗೂ ಹೆಚ್ಚುವರಿ ಪಟ್ಟಿಯಲ್ಲಿರುವ ವಿಕಲಚೇತನ ನೌಕರರಿಗೆ ಸೇವೆಯಲ್ಲಿ ಒಂದು ಬಾರಿ ಮಾತ್ರ ವಿನಾಯಿತಿ ಎಂಬ ಅಂಶವನ್ನು ತೆಗೆಯಬೇಕೆಂಬುದರ ಬಗ್ಗೆ |
| 74. | 15-12-2022 | ರಿಜಿಸ್ಟ್ರರ್, ಕುಲಸಚಿವರು ಭಾರತೀಯ ವಿಜ್ಞಾನ ಸಂಸ್ಥೆ ಬೆಂಗಳೂರು | ಸೈಯ್ಯದ್ ನಿಜಾಮುದ್ದೀನ್ ಇವರ ಮನವಿಯ ಬಗ್ಗೆ |
| 75. | 19-12-2022 | ಜಿ.ಶೇಖರಪ್ಪ, ನಿವೃತ್ತರು ಜಿ.ಹೆಚ್.ಪಿ.ಎಸ್.ಶಾಲೆ ಕುರುಬರಗೇರೆ, ಹರಪನಹಳ್ಳಿ ತಾ॥ ವಿಜಯನಗರ ಜಿಲ್ಲೆ | ಕ್ಷೇತ್ರ ಶಿಕ್ಷಣಾಧಿಕಾರಿಗಳ ಅಧಿಕಾರಿಗಳು ದುರದ್ದೇಶ ಪೂರ್ವಕವಾಗಿ ಗಳಿಕೆ ರಜೆಗಳನ್ನು ನಮೂದಿಸದೇ ಕಿರುಕುಳ ಕೊಡುತ್ತಿರುವ ಬಗ್ಗೆ ದೂರು |

ಈ ಎಲ್ಲಾ ಮನವಿಗಳಿಗೆ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016ರ ಅವಕಾಶದಂತೆ ವಿಕಲಚೇತನ ವ್ಯಕ್ತಿಗಳ ಹಕ್ಕುಗಳನ್ನು ಸಂರಕ್ಷಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಹಾಗೂ ವರದಿ ನೀಡುವಂತೆ ಸಂಬಂಧಪಟ್ಟ ಪ್ರಾಧಿಕಾರಿಗಳಿಗೆ ಆಯುಕ್ತಾಲಯದಿಂದ ಸೂಚನೆ ನೀಡಲಾಗಿರುತ್ತದೆ.

22/12/2022

ರಾಜ್ಯ ಆಯುಕ್ತರ ಪರವಾಗಿ

ಅನುಬಂಧ - 6

## ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮದ ರಾಜ್ಯ ಆಯುಕ್ತರ ನ್ಯಾಯಾಲಯ

(ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016 ರ ಪರಿಚ್ಛೇದ 82 ರನ್ವಯ ಸಿವಿಲ್ ನ್ಯಾಯಾಲಯದ ಅಧಿಕಾರವನ್ನು ಹೊಂದಿದೆ)

ನಂ. 55, 2ನೇ ಮಹಡಿ, ಅಭಯ ಸಂಕೀರ್ಣ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಕಟ್ಟಡ, ರಿಸಾಲ್ದಾರ್ ರಸ್ತೆ (ಪ್ಲಾಟ್ ಫಾರಂ ರಸ್ತೆ), ಶೇಷಾದ್ರಿಪುರಂ, ಬೆಂಗಳೂರು - 560020.

ಪ್ರಕರಣ ಸಂಖ್ಯೆ: 14/2020-21

**ಫಿರ್ಯಾದುದಾರರು**

ಕುಮಾರಿ ಜೈಕಿರಣ್ ಸಿ.ಕೆ
ಬಿನ್ ಕೇಶವಮೂರ್ತಿ, ಮೊದಲನೆ ಮಹಡಿ ನಂ.212,
ಹೊಯ್ಸಳನಗರ ಮೇನ್ ರೋಡ್, ಹಾಸನ -573201

**ವಿರುದ್ಧ**

1. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
   ಜಿಲ್ಲಾ ಪಂಚಾಯಿತಿ, ಬಿ.ಎಂ ರಸ್ತೆ, ಹಾಸನ ಜಿಲ್ಲೆ-573201.

2. ಆಯುಕ್ತರು
   ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
   ಬಹುಮಹಡಿಗಳ ಕಟ್ಟಡ, ಬೆಂಗಳೂರು-01.

3. ಪೊಲೀಸ್ ಅಧೀಕ್ಷಕರು
   ಪೊಲೀಸ್ ಇಲಾಖೆ, ಹಾಸನ ಜಿಲ್ಲೆ- 573201.

4. ಶ್ರೀ ದಿಲೀಪ್
   ಉಪ ನಿರ್ದೇಶಕರು (ಪ್ರಭಾರ)
   ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ
   ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಸಕಲೇಶಪುರ, ಹಾಸನ ಜಿಲ್ಲೆ, ಹಾಸನ-573134

5. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ,
   ವಿಕಲಚೇತನರ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,
   ಹಾಸನ ಜಿಲ್ಲೆ-573201.

6. ಅಧ್ಯಕ್ಷರು
   ಮಹಿಳಾ ಆಂತರಿಕ ದೂರು ಸಮಿತಿ
   ಉಪ ನಿರ್ದೇಶಕರ ಕಚೇರಿ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
   ಹಾಸನ -573201.

...ವಾನಿಸಲಾಗಿದೆ
ದಿನಾಂಕ 3/6/202...

ಬೆಂಗಳೂರು

ಆಯುಕ್ತರು

20

591

1. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಯಾಗಿ ಹಾಸನ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕುಮಾರಿ ಸಿ.ಕೆ ಜೈಕಿರಣ್ ರವರು ರಾಜ್ಯ ಆಯುಕ್ತರು, ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ ಕಚೇರಿಗೆ ದಿನಾಂಕ 14-09-2020 ರಂದು ದೂರು ಸಲ್ಲಿಸಿರುತ್ತಾರೆ.

2. ದೂರುದಾರರು ದೃಷ್ಟಿನ್ಯೂನತೆವುಳ್ಳ ನೌಕರರಾಗಿದ್ದು ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯಲ್ಲಿ ತರಬೇತಿ ಪಡೆಯುತ್ತಿದ್ದ ಸಂದರ್ಭದಲ್ಲಿ ಇವರೊಂದಿಗೆ ತರಬೇತಿ ಪಡೆಯುತ್ತಿದ್ದ ಸಕಲೇಶಪುರ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಯಾದ ಶ್ರೀ ದಿಲೀಪ್ ಎಂಬುವವರು ಲೈಂಗಿಕ ದೌರ್ಜನ್ಯ ಎಸಗಲು ಪ್ರಯತ್ನಿಸಿದ್ದಾಗಿ ತಿಳಿಸಿರುತ್ತಾರೆ. ಈ ತರಬೇತಿ ಅವಧಿ ಮುಗಿದ ನಂತರ ಹಾಸನ ಜಿಲ್ಲೆಯಲ್ಲಿ ಖಾಲಿ ಇದ್ದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರ ಹುದ್ದೆಗೆ ಶ್ರೀ ದಿಲೀಪ್ ರವರನ್ನು ನಿಯೋಜಿಸಿ ಜಿಲ್ಲಾ ಪಂಚಾಯಿತಿ ಹಾಸನ ಕಚೇರಿಯು ಆದೇಶ ಹೊರಡಿಸಿರುತ್ತದೆ. ಈ ಹುದ್ದೆಯನ್ನು ಅಲಂಕರಿಸಿದ ಶ್ರೀ ದಿಲೀಪ್ ಎಂಬುವವರು ದೂರುದಾರರಿಗೆ ಲೈಂಗಿಕ ಕಿರುಕುಳ ಕೊಡುವುದನ್ನು ಮುಂದುವರೆಸಿದ್ದು ಇದಕ್ಕೆ ದೂರುದಾರರು ವಿರೋದವಡಿಸಿದಾಗ ಶ್ರೀ ದಿಲೀಪ್ ರವರು ಇವರ ವಿರುದ್ಧ ದೌರ್ಜನ್ಯವೆಸಗಲು ಮುಂದಾಗಿದ್ದು ದೂರುದಾರರ ಮೇಲೆ ಅಪಾಯಕಾರಿ ದ್ರವ್ಯ ಎರಚುವಂತೆ ಸುಪಾರಿ ನೀಡಿರುವುದಾಗಿ ತಿಳಿಸಿರುತ್ತಾರೆ. ಅಲ್ಲದೆ ದೂರುದಾರರ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಮಾಡಿ ಎಫ್.ಐ.ಆರ್ ದಾಖಲಿಸುವುದಾಗಿ ಪ್ರಯತ್ನಿಸುತ್ತಿರುವ ಬಗ್ಗೆ ತಿಳಿಸಿರುತ್ತಾರೆ.

3. ಈ ಮೇಲ್ಕಂಡ ಅಂಶಗಳನ್ನು ಆದರಿಸಿ ಶ್ರೀಮತಿ ಕುಮಾರಿ ಜೈಕಿರಣ್ ರವರು ಸ್ಥಳೀಯ ಠಾಣೆಯಲ್ಲಿ ಶ್ರೀ ದಿಲೀಪ್ ರವರ ವಿರುದ್ಧ ದೂರು ನೀಡಿ ಪ್ರಥಮ ವರ್ತಮಾನ ವರದಿಯ ಪ್ರತಿಯನ್ನು ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ ನ್ಯಾಯಾಲಯಕ್ಕೆ ಸಲ್ಲಿಸಿ ಲೈಂಗಿಕ ದೌರ್ಜನ್ಯ ಹಾಗೂ ಅಂಗವಿಕಲ ವ್ಯಕ್ತಿಗೆ ಕಿರುಕುಳ ನೀಡುತ್ತಿರುವ ಹಿನ್ನೆಲೆಯಲ್ಲಿ ಶ್ರೀ ದಿಲೀಪ್ ರವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ನ್ಯಾಯ ದೊರಕಿಸಿ ಕೊಡುವಂತೆ ಕೋರಿರುತ್ತಾರೆ.

4. ದೂರುದಾರರ ಮನವಿಯನ್ನು ಪರಿಶೀಲಿಸಿದ ನ್ಯಾಯಾಲಯವು ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ ಕಲಂ 82 ರನ್ವಯ ಆಯುಕ್ತರ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ದಿನಾಂಕ 18.11.2020, 20.07.2021, 05.10.2021, ಮತ್ತು 27.04.2022 ರಂದು ವಿಚಾರಣೆ ನಡೆಸಲಾಯಿತು ಈ ಮಧ್ಯೆ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಹಾಸನ ರವರು ಕುಮಾರಿ ಜೈಕಿರಣ್ ರವರು ನೀಡಿದ್ದ ದೂರಿನ ಮೇಲೆ ವಿವರವಾದ ತನಿಖೆ ನಡೆಸಿ ಆಯುಕ್ತರ ಕಚೇರಿಗೆ ದಿನಾಂಕ 22-10-2020 ರಂದು ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಪರಿಶೀಲಿಸಲಾಗಿ ಕುಮಾರಿ ಸಿ.ಕೆ. ಜೈಕಿರಣ್, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳವರು ಶ್ರೀ ಕೆ.ಜಿ. ದಿಲೀಪ್ (ಪ್ರಭಾರ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ಇವರ ವಿರುದ್ಧ ಮಾಡಿರುವ ಆರೋಪಗಳಿಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಿ ದೂರುದಾರರ ಹೇಳಿಕೆ ಮತ್ತು ಸಾಕ್ಷಗಳನ್ನು ಪರಿಶೀಲಿಸಿದಾಗ ಸದರಿ ಆರೋಪಗಳು ವೈಯಕ್ತಿಕ ದೋಷರೋಪಗಳಾಗಿದ್ದು ಮೇಲ್ನೋಟಕ್ಕೆ ಯಾವುದೇ ಸತ್ಯಾಂಶ ಕಂಡುಬಂದಿರುವುದಿಲ್ಲವೆಂದು ಅಭಿಪ್ರಾಯಿಸಿರುತ್ತಾರೆ.

5. ತದನಂತರ ಪ್ರತಿವಾದಿಯಾದ ಶ್ರೀ ದಿಲೀಪ್ ರವರು ದಿನಾಂಕ 18-11-2020ರಂದು ಆಯುಕ್ತರು ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ ಕಚೇರಿಗೆ ಮನವಿ ಸಲ್ಲಿಸಿ ದೂರುದಾರರಾದ ಕುಮಾರಿ ಸಿ.ಕೆ ಜೈಕಿರಣ್ ರವರು ತಮ್ಮ ವಿರುದ್ಧ ಇಲ್ಲ ಸಲ್ಲದ ಆರೋಪಗಳನ್ನು ಮಾಡಿ ಸರ್ಕಾರದ ಉನ್ನತ ಅಧಿಕಾರಿಗಳಿಗೆ ದೂರುಗಳನ್ನು ಸಲ್ಲಿಸುತ್ತಿದ್ದು ಇವರ ದೂರುಪಟ್ಟಿಯ ಅಂಶಗಳು ನಿರಾಧಾರವಾಗಿರುವುದಾಗಿ ತಿಳಿಸಿ ಸರ್ಕಾರಿ ಕೆಲಸದಲ್ಲಿ ಅಪ್ರಾಮಾಣಿಕವಾಗಿ ವರ್ತಿಸುವುದರ ಮೂಲಕ ಕರ್ತವ್ಯಲೋಪವೆಸಗಿರುತ್ತಾರೆ ಎಂದು ತಿಳಿಸಿರುತ್ತಾರೆ. ಮುಂದುವರೆದು ಕುಮಾರಿ ಸಿ.ಕೆ ಜೈಕಿರಣ್ ರವರು ತಮ್ಮ ತಪ್ಪುಗಳನ್ನು ಮತ್ತು ವೈಫಲ್ಯಗಳನ್ನು ಮುಚ್ಚಿಕೊಳ್ಳಲು ತಮ್ಮ ಹಾಗೂ ವಿವಿಧ ಅಧಿಕಾರಿಗಳ ವಿರುದ್ಧ ಲೈಂಗಿಕ ಕಿರುಕುಳದ ಅಸ್ತ್ರವನ್ನು ಉಪಯೋಗಿಸುತ್ತಿರುವುದಾಗಿ ತಿಳಿಸಿರುತ್ತಾರೆ. ಲೈಂಗಿಕ ಕಿರುಕುಳ ಮಾಡಿರುವುದು ಸತ್ಯವಾಗಿದ್ದಲ್ಲಿ The Sexual harassment includes such unwelcome sexually determined behavior.

ಆಯುಕ್ತರು

A. Physical Contact and advances
B. A demand or request for sexual favours
C. Sexually colured remarks
D. Showing pornography
E. Any other unwelcome physical verbal or nonverbal conduct of sexual nature

6. ಸದರಿ ವ್ಯಾಖ್ಯಾನದಂತೆ ಕು॥ ಸಿ.ಕೆ. ಜೈಕಿರಣ್ ಇವರ ಪ್ರಕರಣದಲ್ಲಿ ಅವರು ಕಾರ್ಯನಿರ್ವಹಿಸುತ್ತಿರುವ ಕಚೇರಿಯಲ್ಲಿ ಲೈಂಗಿಕ ಕಿರುಕುಳ ನಡೆದಿದೆ ಎನ್ನುವುದಕ್ಕೆ ಈ ಮೇಲಿನ ಯಾವ ಸನ್ನಿವೇಶಗಳು/ಘಟನೆಗಳು ನಡೆದಿರುವುದಿಲ್ಲ ಹೀಗಿರುವಾಗ ಇದರಿಂದ ಚೆನ್ನಾಗಿ ಗೊತ್ತಾಗುವುದೇನೆಂದರೆ ಲೈಂಗಿಕ ಕಿರುಕುಳದ ಅಪಾದನೆಯು ಕಪೋಲಕಲ್ಪಿತ ಮತ್ತು ಆಧಾರರಹಿತವಾಗಿರುತ್ತದೆಯೆಂದು ತಿಳಿಸಿ ಪ್ರಕರಣ ಮುಕ್ತಾಯಗೊಳಿಸಲು ಕೋರಿರುತ್ತಾರೆ.

7. ದೂರುದಾರರಾದ ಕುಮಾರಿ ಸಿ.ಕೆ ಜೈಕಿರಣ್, ರವರು ದಿನಾಂಕ 19-07-2021 ರಂದು ಆಯುಕ್ತಾಲಯಕ್ಕೆ ಮರು ಮನವಿ ಸಲ್ಲಿಸಿ ಶ್ರೀ ದಿಲೀಪ್ ರವರು ಅವರ ಹಣ ಬಲದಿಂದ ಮತ್ತು ರಾಜಕೀಯ ಪ್ರಭಾವದಿಂದ ಸಮಾಜದ ಸಮೂಹಗಳಿಂದ ಪತ್ರಕರ್ತರ ಸಹಾಯದಿಂದ ದೇಶದ ಕಾನೂನನ್ನು ದುರ್ಬಳಕೆ ಮಾಡಿಕೊಂಡು ಅಂಧ ಮಹಿಳೆಯ ವಿರುದ್ಧ ದೌರ್ಜನ್ಯವೆಸಗುವುದನ್ನು ಮುಂದುವರೆಸಿ ಅಂಗವಿಕಲ ಮಹಿಳೆಯನ್ನು ಶೋಷಣೆಗೆ ಒಳಪಡಿಸಿರುತ್ತಾರೆ. ದಲಿತ ಸಂಘರ್ಷ ಸಮಿತಿಯ ಹಾಗೂ ಪತ್ರಿಕ ಮಾಧ್ಯಮದ ಕೆಲವರನ್ನು ಹಾಸನ ನಗರ ಕೆ.ಆರ್. ಪುರಂ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಇವರು ವಿರುದ್ಧ ದೂರು ದಾಖಲಿಸಿರುವುದಾಗಿ ತಿಳಿಸಿರುತ್ತಾರೆ. ಶ್ರೀ ದಿಲೀಪ್ ರವರು ಉಪ ನಿರ್ದೇಶಕರು ಹುದ್ದೆಯಲ್ಲಿ ಪ್ರಭಾರ ಹೊಂದಿದ್ದು ಈ ಹುದ್ದೆಯ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ದೂರುದಾರರಾದ ಕುಮಾರಿ ಸಿ.ಕೆ ಜೈಕಿರಣ್ ರವರ ಮೇಲೆ ಅತ್ಯಾಚಾರ ಎಸಗಲು ಪ್ರಯತ್ನ ಪಟ್ಟಿರುವುದಾಗಿ ತಿಳಿಸಿರುತ್ತಾರೆ. ಈ ದೌರ್ಜನ್ಯದ ವಿರುದ್ಧ ಸ್ಥಳೀಯ ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರೂ ಈತನ ವಿರುದ್ಧ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ತಿಳಿಸಿ ಶ್ರೀ ದಿಲೀಪ್ ರವರನ್ನು ಪ್ರಭಾರ ಉಪ ನಿರ್ದೇಶಕರ ಹುದ್ದೆಯಿಂದ ಬೇರೆ ಕಡೆಗೆ ವರ್ಗಾವಣೆ ಮಾಡುವುದರ ಮೂಲಕ ಸರ್ಕಾರವು ತನಗೆ ವಹಿಸಿರುವ ಹುದ್ದೆಯ ಜವಾಬ್ದಾರಿಯನ್ನು ನೆಮ್ಮದಿಯಿಂದ ನಿರ್ವಹಿಸಲು ಅವಕಾಶ ಕಲ್ಪಿಸುವಂತೆ ಕೋರಿರುತ್ತಾರೆ.

8. ಪ್ರಭಾರ ಸೇವೆಗೆ ಅಗತ್ಯವಿರುವ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016 ಕಲಂ 82ರನ್ವಯ ಅಂಗವಿಕಲರ ಹಕ್ಕುಗಳನ್ನು ಸಂರಕ್ಷಿಸುವಲ್ಲಿ ಹಾಗೂ ಅವರ ಕುಂದು ಕೊರತೆಗಳನ್ನು ಪರಿಶೀಲಿಸುವಲ್ಲಿ ಆಯುಕ್ತರು ಸಿವಿಲ್ ದಂಡ ಪ್ರಕ್ರಿಯಾ ಸಂಹಿತೆ 1908 (1908ರ 5)ರ ಮೇರೆಗೆ ನ್ಯಾಯಾಲಯದಲ್ಲಿ ನಿಹಿತಗೊಳಿಸಲಾದಂತಹ ಅಧಿಕಾರವನ್ನು ಹೊಂದಿರುತ್ತಾರೆ. ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016, ಕಲಂ 82(2) ರನ್ವಯ ರಾಜ್ಯ ಆಯುಕ್ತರ ಮುಂದೆ ಇರುವ ಪ್ರತಿಯೊಂದು ವ್ಯವಹರಣೆಯು ಭಾರತೀಯ ದಂಡ ಸಂಹಿತೆಯ 1860 (1860ರ 45) ರ 193 ಮತ್ತು 228ನೇ ಪ್ರಕರಣಗಳ ಅರ್ಥವ್ಯಾಪ್ತಿಯೊಳಗೆ ಒಂದು ನ್ಯಾಯಿಕ ವ್ಯವಹರಣೆಯಾಗಿರುತ್ತದೆ ಮತ್ತು ಆಯುಕ್ತರು ಸಕ್ಷಮ ಪ್ರಾಧಿಕಾರ ಇವರುಗಳನ್ನು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ 1973 (1974ರ 2)ರ 195ನೇ ಪ್ರಕರಣದ ಮತ್ತು 26ನೇ ಅಧ್ಯಾಯದ ಉದ್ದೇಶಕ್ಕಾಗಿ ಸಿವಿಲ್ ನ್ಯಾಯಾಲಯವೆಂದು ಭಾವಿಸಲಾಗಿದೆ.

ವಾದ ವಿವಾದಗಳನ್ನು ಪರಿಶೀಲಿಸಿದ ನ್ಯಾಯಾಲಯವು, ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016ರ ಕಲಂ 82 ರಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಬಳಸಿ ಈ ಕೆಳಕಂಡಂತೆ ಆದೇಶ ನೀಡಿರುತ್ತೇನೆ.

**– : ಆದೇಶ : –**

ದೂರುದಾರರಾದ ಕುಮಾರಿ ಜೈಕಿರಣ್ ಶಿಶು ಅಭಿವೃದ್ಧಿ ಅಧಿಕಾರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಸನ

ಜಿಲ್ಲೆ ಇವರು ಅಂಗವಿಕಲ ನೌಕರರಾಗಿದ್ದು, ಇವರ ಸೇವಾ ಹಿತದೃಷ್ಟಿಯಿಂದ ಅವರು ಸಲ್ಲಿಸುತ್ತಿರುವ ಸರ್ಕಾರಿ ಸೇವೆಗೆ ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016ರ ರೀತ್ಯ ಒದಗಿಸಬೇಕಾಗಿರುವುದು ಮತ್ತು ಅವರಿಗೆ ಸೂಕ್ತ ರಕ್ಷಣೆ ನೀಡಬೇಕಾಗಿರುವುದು ಸರ್ಕಾರದ ಕರ್ತವ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಸದರಿ ನೌಕರರಿಗೆ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸುವುದರ ಮೂಲಕ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016ರ ಕಲಂ 07ರ ರೀತ್ಯ ಅವರಿಗೆ ರಕ್ಷಣೆ ನೀಡುವಂತೆ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ರವರಿಗೆ ಸೂಚಿಸಿದೆ.

1. ದೂರುದಾರರಾದ ಕುಮಾರಿ ಜೈಕರ್ ಸಿ.ಕೆ ರವರು ಸರ್ಕಾರವು ನೀಡಿರುವ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಹುದ್ದೆಯ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಲು ಅವರು ಯಾವುದೇ ರೀತಿಯ ಶೋಷಣೆಗೆ ಒಳಗಾಗದಂತೆ ರಕ್ಷಣೆ ನೀಡಲು ಕ್ರಮಗಳನ್ನು ಕೈಗೊಳ್ಳತಕ್ಕದ್ದು.
2. ದೂರುದಾರರು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿ ಶೋಷಣೆಗೆ ಒಳಪಟ್ಟಿರುವ ಬಗ್ಗೆ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಾನೂನು ರೀತ್ಯ ಕ್ರಮ ವಹಿಸುವುದು.
3. ಆಪಾದಿತ ನೌಕರ/ವ್ಯಕ್ತಿಯಿಂದ ದೂರುದಾರರ ವರ್ಚಸ್ಸಿಗೆ ಯಾವುದೇ ರೀತಿಯ ಧಕ್ಕೆ ಉಂಟಾಗುವ ಸಂದರ್ಭಗಳಲ್ಲಿ ಅಂತಹ ನೌಕರನನ್ನು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳದಿಂದ ಬೇರೊಂದು ಸ್ಥಳಕ್ಕೆ ವರ್ಗಾಯಿಸಿ ಅವರ ವಿರುದ್ಧ ಇರುವ ಸಾಕ್ಷಗಳನ್ನು ನಾಶಪಡಿಸದಂತೆ ಸೂಕ್ತ ಕ್ರಮ ಕೈಗೊಳ್ಳುವುದು.
4. ದೂರುದಾರ ಅಂಗವಿಕಲ ನೌಕರರಿಗೆ ಸಮರ್ಪಕವಾಗಿ ಕೆಲಸ ನಿರ್ವಹಿಸಲು ಹಾಗೂ ಸರ್ಕಾರದ ಹುದ್ದೆಯನ್ನು ಜವಾಬ್ದಾರಿಯುತವಾಗಿ ನಿರ್ವಹಿಸಲು ಅವರಿಗೆ ಅಗತ್ಯವಿರುವ ತರಬೇತಿ ನೀಡತಕ್ಕದ್ದು.

ಈ ಆದೇಶದ ಉಲ್ಲಂಘನೆ ಮಾಡುವ ಪ್ರಾಧಿಕಾರ / ವ್ಯಕ್ತಿ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016 ಕಲಂ 92ರ ರೀತ್ಯ ಆರು ತಿಂಗಳುಗಳಿಗಿಂತ ಕಡಿಮೆ ಇರದ ಮತ್ತು ಐದು ವರ್ಷಗಳ ಅವಧಿ ವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಹಾಗೂ ಜುಲ್ಮಾನೆಯಿಂದ ದಂಡಿತರಾಗಿರುತ್ತಾರೆ ಎಂದು ತಿಳಿಸುತ್ತಾ ಪ್ರಕರಣವನ್ನು ಇತ್ಯರ್ಥ ಪಡಿಸಿ ಮುಕ್ತಾಯಗೊಳಿಸಿದೆ.

(ಈ ಆದೇಶವನ್ನು ನಾನು ದಿನಾಂಕ: 01-06-2022 ರಂದು ಉಕ್ತಲೇಖನ ನೀಡಿರುತ್ತೇನೆ)

K. S. Latha Kumar

(ಕೆ.ಎಸ್. ಲತಾಕುಮಾರಿ ಭಾ.ಆ.ಸೇ)
ರಾಜ್ಯ ಆಯುಕ್ತರು.
ಆಯುಕ್ತರು
ರಾಜ್ಯ ಅಂಗವಿಕಲ ವ್ಯಕ್ತಿಗಳ ಆಯುಕ್ತರ ಕಛೇರಿ
ಕರ್ನಾಟಕ, ಬೆಂಗಳೂರು - 560 020

ಬೆಂಗಳೂರು